www.divinegen.org
www.dgmbethelchurch.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ–09 ಸಂಚಿಕೆ–12 ಡಿಸೆಂಬರ್ 2015
Volume : IX Issue : 12 December 2015

Editor, Publisher, Printer
& Owned by :
**Sunil John D'souza**
S/o. Late Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ಎರಡನೇ ಬರೋಣ
3. ಹೃದಯ
4. ಸ್ಥಳೀಯ ಮತ್ತು ವಿದೇಶ ಸುದ್ದಿ
5. ಆರೋಗ್ಯ ಸ್ವರ
6. ಕ್ರಿಸ್‌ಮಸ್ ವಿಶೇಷವಾದ ಸಂದೇಶ
7. ನೀತಿವಂತನ ಆಶೀರ್ವಾದಗಳು
8. ಡಿಜಿಎಮ್ ಬೇತೇಲ್ ಅಂಕಣ
9. ಮಹಿಳೆಯರ ಸ್ವರ
10. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧ ನಾಮದಲ್ಲಿ ಪ್ರಿಯ ವಾಚಕ ಸಹೆ

ಕರ್ತನಾದ ಯೇಸುಕ್ರಿಸ್ತನ ಮಧುರವಾದ ನಾಮದಲ್ಲಿ ಸಹೋದರ/ಸಹೋದರಿಯರಿಗೆಲ್ಲಾ ವಂದನೆಗಳು ಹಾಗೂ ಕ್ರಿಸ್‌ಮಸ್ ಹಬ್ಬದ ಶುಭಾಶಯಗಳು.

ಲೂಕ. 21:34-36 ಹೇಳುತ್ತದೆ, ನಿಮ್ಮ ವಿಷಯಗಳಲ್ಲಿ ಜಾಗರೂಕರಾಗಿರ್ರಿ. ಅತೀ ಭೋಜನದ ಮದಡಿನಿಂದಲೂ, ಅಮಲಿನಿಂದಲೂ, ಪ್ರಪಂಚದ ಚಿಂತೆಗಳಿಂದಲೂ, ನಿಮ್ಮ ಹೃದಯಗಳು ಭಾರವಾಗಿರಲಾಗಿ ಆ ದಿವಸವು ನಿಮ್ಮ ಮೇಲೆ ಉರ್ಲಿನಂತೆ ಫಕ್ಕನೆ ಬಂದೀತು. ಆ ದಿವಸವು ಭೂನಿವಾಸಿಗಳೆಲ್ಲರ ಮೇಲೆ ಬರುವುದು. ಆದರೆ ಬರುವದಕ್ಕಿರುವ ಇವುಗಳೆಲ್ಲವುಗಳೊಳಗಿಂದ ತಪ್ಪಿಸಿಕೊಳ್ಳುವುದಕ್ಕೂ ಮನುಷ್ಯಕುಮಾರನ ಮುಂದೆ ನಿಂತುಕೊಳ್ಳುವುದಕ್ಕೂ ನೀವು ಪೂರ್ಣ ಶಕ್ತರಾಗುವಂತೆ ಎಲ್ಲಾ ಕಾಲದಲ್ಲಿಯೂ ದೇವರಿಗೆ ವಿಜ್ಞಾಪನೆ ಮಾಡಿಕೊಳ್ಳುತ್ತಾ ಎಚ್ಚರವಾಗಿರ್ರಿ ಅಂದನು. ನಾವು ಪ್ರತಿವರ್ಷ ಕ್ರಿಸ್‌ಮಸ್ ಹಬ್ಬ ಆಚರಿಸುತ್ತಾ ಬಂದಿರುತ್ತೇವೆ ಎಷ್ಟು ಜನರ ಹೃದಯದಲ್ಲಿ ಕ್ರಿಸ್ತನು ಹುಟ್ಟಲು ಅವಕಾಶ ಮಾಡಿ ಕೊಟ್ಟಿದ್ದೀರಿ. ಪ್ರಕ. 3:20ರ ಪ್ರಕಾರ ನಮ್ಮ ಹೃದಯದ ಬಾಗಿಲನ್ನು ಆತನು ತಟ್ಟುತ್ತಾ ಇದ್ದಾನೆ. ಹೇಗೆ ಆತನು ನಮ್ಮ ಹೃದಯದಲ್ಲಿ ಬರುತ್ತಾನೆ? ಪಾಪಕ್ಕೆ ಪಶ್ಚಾತ್ತಾಪಪಟ್ಟು ಆತನ ಮರಣ ಹೂಣಲ್ಪಡುವಿಕೆ, ಪುನರುತ್ಥಾನದ ಮೇಲೆ ನಂಬಿಕೆಯಿಟ್ಟು ಆತನನ್ನು ನಮ್ಮ ಜೀವಿತದ ಸ್ವಂತ ರಕ್ಷಕನಾಗಿ ಅಂಗೀಕರಿಸುವುದರ ಮೂಲಕ ಆತನು ನಮ್ಮ ಹೃದಯಗಳಲ್ಲಿ ಬಂದು ವಾಸಮಾಡುತ್ತಾನೆ. ಕ್ರಿಸ್ತನ ಬರೋಣ ಹತ್ತಿರದಲ್ಲೇ ಇದೆ. ನಾವು ಇನ್ನು ಎಚ್ಚರವಾಗದಿದ್ದರೆ ಆತನ ರಹಸ್ಯ ಬರೋಣದಲ್ಲಿ ಕೈ ಬಿಡಲ್ಪಡುವಂತಹ ಪರಿಸ್ಥಿತಿ ಬಂದು ಬಿಡುತ್ತದೆ. 1 ಕೊರಿ. 16:22ರ ಪ್ರಕಾರ ಆದಿ ವಿಶ್ವಾಸಿಗಳು ಪರಸ್ಪರ ಭೇಟಿಯಾಗುವಾಗ ಮಾರನಾಥ ಎಂದು ಪರಸ್ಪರ ವಂದಿಸುತ್ತಿದ್ದರು. ಮಾರನಾಥ ಅಂದರೆ ಕರ್ತನಾದ ಯೇಸುವೇ ಬೇಗನೇ ಬಾ ಎಂದು ಅಂದರೆ ಅವರು ಪರಸ್ಪರ ವಂದಿಸುವಾಗ ಮುಂದಿನವರಿಗೆ ಕ್ರಿಸ್ತನು ಬೇಗನೇ ಬರಲಿಕ್ಕಿದ್ದಾನೆ ನೀನು ನಿನ್ನನ್ನು ಸಿದ್ಧಪಡಿಸಿಕೊಳ್ಳಬೇಕೆಂದು ಸಂದೇಶವನ್ನು ರವಾನಿಸುತ್ತಿದ್ದರು. ಈ ಕ್ರಿಸ್‌ಮಸ್‌ನಲ್ಲಿ ಪ್ರತಿಯೊಬ್ಬರನ್ನು ಕರ್ತನು ಸಿದ್ಧಪಡಿಸಲಿ ಎಂದು ಹಾರೈಸುತ್ತಾ ಪ್ರತಿಯೊಬ್ಬರಿಗೂ ಕ್ರಿಸ್‌ಮಸ್ ಹಬ್ಬದ ಹಾಗೂ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತೇನೆ.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

1) "ಉಪದೇಶ ಕೇಳಿರಿ, ಅದನ್ನು ಬಿಡದೆ ಜ್ಞಾನವಂತರಾಗಿರಿ" (ಜ್ಞಾನೋ. 8:33). ನಾವು ಜ್ಞಾನವಂತರಾಗಬೇಕಾದರೆ ಉಪದೇಶ ಕೇಳಲೇ ಬೇಕು. ಉಪದೇಶವು ದೇವಜನರನ್ನು ಜ್ಞಾನಿಗಳನ್ನಾಗಿ ಮಾಡುತ್ತದೆ. ಆದಿ ಸಭೆಯನ್ನು ನಾವು ನೋಡುವುದಾದರೆ ಅಪೋಸ್ತಲ ಕೃತ್ಯ. 2:42 ರಕ್ಷಣೆ ಹೊಂದಿದ ಮೂರು ಸಾವಿರ ಜನರು ಅಪೋಸ್ತಲರ ಉಪದೇಶ ಕೇಳುವುದರಲ್ಲಿಯೂ, ರೊಟ್ಟಿ ಮುರಿಯುವುದರಲ್ಲಿಯೂ, ಸಹೋದರರ ಅನ್ಯೋನ್ಯತೆಯಲ್ಲಿಯೂ ನಿರತರಾಗಿದ್ದರು ಎಂದು ವಾಕ್ಯದಲ್ಲಿ ಕಾಣಬಹುದು. ಇದರಿಂದಾಗಿ ಆದಿ ಸಭೆಯ ವಿಶ್ವಾಸಿಗಳು ಜ್ಞಾನಿಗಳಾಗಿದ್ದದ್ದು ಮಾತ್ರವಲ್ಲ, ಲೋಕವನ್ನು ನಡುಗಿಸುವಂತಹ ಸೇವೆಯನ್ನು ಮಾಡಿದರು. ಅವರು ಹೆಚ್ಚು ಓದಿದವರಲ್ಲ, ವಿದ್ಯಾಭ್ಯಾಸವೇನು ಹೆಚ್ಚು ಇರಲಿಲ್ಲ. ಆದರೆ ಓದಿದಂತಹ ಜ್ಞಾನಿಗಳು ಆಶ್ಚರ್ಯಪಡುವ ರೀತಿಯಲ್ಲಿ ಕರ್ತನು ಅವರನ್ನು ಉಪಯೋಗಿಸಿದನು. ಅ.ಕೃ. 6:8–10 ರಲ್ಲಿ ಸ್ತೆಫನನ ಕುರಿತು ಓದುತ್ತೇವೆ, ಸ್ತೆಫನನು ದೇವರ ಕೃಪೆಯಿಂದಲೂ ಬಲದಿಂದಲೂ ತುಂಬಿದವನಾಗಿ ಜನರಲ್ಲಿ ಮಹಾ ಅದ್ಭುತ ಕಾರ್ಯಗಳನ್ನು, ಸೂಚಕ ಕಾರ್ಯಗಳನ್ನು ಮಾಡುತ್ತಾ ಇದ್ದನು. ಆದರೆ ಲಿಬರ್ತಿನರೆಂಬವರ ಸಮಾಜದವರಲ್ಲಿಯೂ ಕುರೇನ್ಯದವರ ಮತ್ತು ಅಲೆಕ್ಸಾಂದ್ರಿಯದವರ ಸಮಾಜದವರಲ್ಲಿಯೂ ಕಿಲಿಕ್ಯ ಅಸ್ಯ ಸೀಮೆಗಳಿಂದ ಬಂದವರ ಸಮಾಜದವರಲ್ಲಿಯೂ ಕೆಲವರು ಎದ್ದು ಸ್ತೆಫನನ ಸಂಗಡ ತರ್ಕ ಮಾಡುತ್ತಾ ಇರಲು ಅವನ ಮಾತಿನಲ್ಲಿ ಕಂಡು ಬಂದ ಜ್ಞಾನವನ್ನು ಪವಿತ್ರಾತ್ಮ ಶಕ್ತಿಯನ್ನು ಎದುರಿಸಲಾರದೆ ಹೋದರು. ಮುಂದಿನ ಅಧ್ಯಾಯದಲ್ಲಿ ಶಕ್ತವಾಗಿ ಉಪಯೋಗಿಸುವಂತಹ ಸ್ತೆಫನನ ಕುರಿತು ಮತ್ತು ರಕ್ತ ಸಾಕ್ಷಿಯಾಗಿ ಸಾಯುವಂತಹ ಸ್ತೆಫನನ ಕುರಿತು ಓದುತ್ತೇವೆ. ಸ್ತೆಫನನಲ್ಲಿದ್ದಂತಹ ಜ್ಞಾನ ಲೌಕಿಕವಾದ ಜ್ಞಾನವಾಗಿರಲಿಲ್ಲ, ಅದು ಆತ್ಮೀಕ ಜ್ಞಾನವಾಗಿತ್ತು. ಇದರಿಂದ ಅನೇಕ ಜನರನ್ನು ಕರ್ತನ ಕಡೆಗೆ ಆತನು ನಡೆಸಿದನು. ಅ.ಕೃ. 4:13 ರಲ್ಲಿ ಪೇತ್ರ ಯೋಹಾನರು ಧೈರ್ಯದಿಂದ ಮಾತಾಡುವುದನ್ನು ಆ ಸಭಿಕರು ನೋಡಿ ಅವರು ಶಾಸ್ತ್ರಾಭ್ಯಾಸ ಮಾಡದ ಸಾಧರಣರೆಂದು ತಿಳಿದು ಆಶ್ಚರ್ಯಪಟ್ಟರು.

ಪ್ರಕ. 3:3 ರಲ್ಲಿ 2ನೇದಾಗಿ ದೇವರ ಕಡೆಗೆ ತಿರುಗಿಕೊಳ್ಳುವ ವಿಷಯದಲ್ಲಿ ಬರೆದಿದೆ. ದೇವರ ಕಡೆಗೆ ತಿರುಗಿಕೊಳ್ಳುವುದು ಅಂದರೆ ಪಾಪಕ್ಕೆ ಪಶ್ಚಾತ್ತಾಪಪಡುವುದು ಮತ್ತು ದೇವರು ಹೇಳುವುದನ್ನು ಕೇಳುವುದಾಗಿದೆ ಮತ್ತು ದೇವರು ಹೇಳುವಂತಹ ಮಾರ್ಗದಲ್ಲಿ ನಡೆಯಬೇಕು. ಯೋನ. 3:1–10 ರಲ್ಲಿ ಯೋನನ ಪ್ರಸಂಗ ಕೇಳಿದ ನಿನವೆಯ ಜನರು ಮಾನಸಾಂತರ ಪಟ್ಟು ದೇವರ ಕಡೆಗೆ ತಿರುಗಿಕೊಳ್ಳುವುದನ್ನು ನಾವು ಕಾಣಬಹುದು. ಮತ್ತಾ. 3:8ರಲ್ಲಿ ಸ್ನಾನಿಕ ಯೋಹಾನನು ಪಶ್ಚಾತ್ತಾಪ ಪಟ್ಟಿದ್ದಿರೆಂದು ತಕ್ಕ ಫಲಗಳ ಮೂಲಕ ತೋರಿಸಿರಿ ಎಂದು ಹೇಳಿದನು. ಮಾನಸಾಂತರದ ಫಲಗಳನ್ನು ನಮ್ಮ ಜೀವಿತದಲ್ಲಿ ತೋರಿಸಬೇಕು. ಅನೇಕರು ಮಾನಸಾಂತರ ಪಟ್ಟಿದ್ದಾರೆಂದು ಹೇಳುತ್ತಾರಾದರೂ ಅವರ ಜೀವಿತದಲ್ಲಿ ಸ್ವಲ್ಪ ಕೂಡ ಬದಲಾವಣೆ ಇರುವುದಿಲ್ಲ. ನಿಜವಾದ ಮಾನಸಾಂತರ ನಮ್ಮ ಜೀವಿತದಲ್ಲಿ ಬದಲಾವಣೆಯನ್ನು ತರುತ್ತದೆ. ನಾವು ಇತರರಿಗೆ ಪ್ರೀತಿ ತೋರಿಸದಿದ್ದರೆ ಮತ್ತು ಕೆಟ್ಟ ಸ್ವಭಾವಗಳನ್ನು ಬಿಟ್ಟು ಬಿಡದೆ ಹೋದರೆ ಕ್ರಿಸ್ತನಲ್ಲಿ ಫಲಕೊಡಲು ಸಾಧ್ಯವಿಲ್ಲ.

3ನೇದಾಗಿ ಪ್ರಕ. 3:3ರಲ್ಲಿ ನೀನು ಎಚ್ಚರವಾಗಿಲ್ಲದಿದ್ದರೆ. ನಿದ್ರೆಮಾಡುವವನೇ ಎಚ್ಚರವಾಗು, ಸತ್ತವರನ್ನು ಬಿಟ್ಟು ಎದ್ದೇಳು ಎಂದು ತಿಳಿಸುತ್ತದೆ (ಎಫೆ. 5:14). ಕರ್ತನ ಬರೋಣದ ಪರಿಜ್ಞಾನದೊಂದಿಗೆ ನಾನು ಜೀವಿಸಬೇಕು. ಆತ್ಮೀಕವಾದ ನಿದ್ರೆ ಅಪಾಯಕಾರಿಯಾದದ್ದಾಗಿದೆ. ಎಚ್ಚರವಾಗಿರುವುದು ಅಂದರೆ ಪೂರ್ಣವಾದ ಸಿದ್ಧತೆಯೊಂದಿಗೆ ಇರುವುದು ಎಂದು ಅರ್ಥ ಮಾತ್ರವಲ್ಲ, ಯಾವುದೇ ಸಮಯದಲ್ಲಿ ಸಿದ್ಧವಾಗಿರುವುದಾಗಿದೆ. ಕರ್ತನ ಬರೋಣವು ಹತ್ತಿರವಾಗಿದೆ ಎಂದು ಸತ್ಯವೇದದ ಮೂಲಕವಾಗಿ, ಹೇಳಿರುವ ಎಚ್ಚರಿಕೆಯ ಮಾತುಗಳ ಮೂಲಕವಾಗಿ ಮತ್ತು ಗುರುತು, ಸೂಚನೆಗಳ ಮೂಲಕವಾಗಿ ತಿಳಿದುಕೊಳ್ಳುತ್ತೇವೆ. ನಾವು ಈ ಲೋಕದ ಕಾರ್ಯಗಳಲ್ಲೇ ಇನ್ನು ಮಗ್ನರಾಗಿದ್ದರೇ ಎಚ್ಚರವಾಗಿಲ್ಲ ಎಂದು ಅರ್ಥವಾಗುತ್ತದೆ ಕರ್ತನು ನಮ್ಮನ್ನು ಪ್ರೀತಿಸುವ ನಿಮಿತ್ತವಾಗಿ ಎಚ್ಚರಿಸುತ್ತಾನೆ.

ಪ್ರಕ. 3:3 4ನೇದಾಗಿ ಕಳ್ಳನು ಬರುವಂತೆ ಕರ್ತನು

ನೀನು ನನ್ನ ದೇವರು; ನಿನ್ನನ್ನು ಕೊಂಡಾಡುತ್ತೇನೆ; ನನ್ನ ದೇವರೇ,
ನಿನ್ನನ್ನು ಘನಪಡಿಸುತ್ತೇನೆ (ಕೀರ್ತ. 118:28).

ಬರುತ್ತಾನೆ. ಕಳ್ಳನು ಯಾಕೆ ಬರುತ್ತಾನೆ? ಹೇಗೆ ಬರುತ್ತಾನೆ? ಯಾವಾಗ ಬರುತ್ತಾನೆ?

1. ಕಳ್ಳನು ಬರುವುದು ಅಮೂಲ್ಯವಾದ ವಸ್ತುಗಳನ್ನು ಕದ್ದುಕೊಳ್ಳಲು
2. ಕಳ್ಳನು ನಾವು ಎದುರು ನೋಡದ ರೀತಿಯಲ್ಲಿ ಬರುತ್ತಾನೆ.
3. ಕಳ್ಳನು ಬರುವ ಸಮಯ ನಮಗೆ ಗೊತ್ತಿರುವುದಿಲ್ಲ

ಯೇಸುಕ್ರಿಸ್ತನು ತನ್ನ ಬರೋಣವನ್ನು ಕಳ್ಳನ ಬರೋಣಕ್ಕೆ ಹೋಲಿಸಿರುತ್ತಾನೆ. ಅಂದರೆ ಯಾವ ಗಳಿಗೆಯಲ್ಲಿ ಬೇಕಾದರೆ ಆತನು ಬರಬಹುದು. ನಾವು ಸಿದ್ಧವಾಗಿರಬೇಕು. ಪ್ರಕ. 3:3 4ನೇದಾಗಿ ನಾನು ಯಾವ ಗಳಿಗೆಯಲ್ಲಿ ನಿನ್ನ ಮೇಲೆ ಬರುವೆನೋ ಅದು ನಿನಗೆ ತಿಳಿಯುವುದೇ ಇಲ್ಲ. ಇತ್ತೀಚಿಗೆ ಅನೇಕರು ಕರ್ತನು ಬರುವಂತಹ ವರ್ಷ, ತಿಂಗಳು, ತಾರೀಖು ಹೇಳುವುದಕ್ಕೆ ಆರಂಭಿಸಿದ್ದಾರೆ. ಮತ್ತಾ. 24:36 ಕರ್ತನಾದ ಯೇಸುಕ್ರಿಸ್ತನು ಇದಲ್ಲದೆ ಆ ದಿನದ ವಿಷಯವೂ ನನ್ನ ತಂದೆಯೊಬ್ಬನಿಗೆ ತಿಳಿಯುವುದೇ ಹೊರತು ಮತ್ತಾರಿಗೂ ತಿಳಿಯದು. ಪರಲೋಕದಲ್ಲಿರುವ ದೂತರಿಗೂ ತಿಳಿಯದು, ಮಗನಿಗೂ ತಿಳಿಯದು.

ಅ.ಕೃ. 1:6–7 ಸ್ವಾಮಿ ನೀನು ಇದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ತಿರುಗಿ ಸ್ಥಾಪಿಸಿ ಕೊಡುವಿಯೋ? ಎಂದು ಕೇಳಲು ಆತನು ಅವರಿಗೆ ತಂದೆಯು ಸ್ವಂತ ಅಧಿಕಾರದಲ್ಲಿಟ್ಟುಕೊಂಡಿರುವ ಕಾಲಗಳನ್ನು, ಸಮಯಗಳನ್ನು ತಿಳುಕೊಳ್ಳುವುದು ನಿಮ್ಮ ಕೆಲಸವಲ್ಲ. ಶಿಷ್ಯರಿಗೆ ಕಾಲ ಸಮಯದ ಬಗ್ಗೆ ಕರ್ತನು ಹೇಳಲಿಲ್ಲ, ಅವರು ಕಾಲ ಸಮಯ ತಿಳುಕೊಳ್ಳಲು ಬಯಸಿದರು ಅದಕ್ಕೆ ಬದಲು ಅವರಿಗೆ ಕರ್ತನು ಈ ರೀತಿ ಹೇಳಿದನು.

ಅ.ಕೃ. 1:8 ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟ ಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು. ಹಾಗಾದರೆ ಒಂದು ಮಾತ್ರ ಸತ್ಯ ಖಂಡಿತವಾಗಿ ಸಿದ್ಧವಾಗಿರುವ ತನ್ನ ಸಭೆಯನ್ನು ತನ್ನ ಜೊತೆಯಲ್ಲಿ ಕರೆದೊಯ್ಯಲು ಕರ್ತನು ಬಂದೇ ಬರುತ್ತಾನೆ. ನಮ್ಮ ಕೆಲಸ ಸಾಕ್ಷಿಗಳಾಗಿರುವುದು ಮತ್ತು ಕರ್ತನ ಬರೋಣಕ್ಕೆ ನಮ್ಮನ್ನು ನಾವೇ ಸಿದ್ಧಪಡಿಸಿಕೊಳ್ಳುವುದು.

"ಸಹೋದರರೇ, ಈ ಸಂಗತಿಗಳನ್ನು ನಡೆಯಬೇಕಾದ ಕಾಲಗಳನ್ನೂ ಗಳಿಗೆಗಳನ್ನೂ ಕುರಿತು ನಿಮಗೆ ಬರೆಯುವುದು ಅವಶ್ಯವಿಲ್ಲ. ರಾತ್ರಿ ಕಾಲದಲ್ಲಿ ಕಳ್ಳನು ಹೇಗೆ ಬರುತ್ತಾನೋ ಹಾಗೆಯೇ ಕರ್ತನ ದಿನವು ಬರುವುದೆಂದು ನೀವೇ ಚೆನ್ನಾಗಿ ತಿಳಿದಿದ್ದೀರಲ್ಲಾ. ಸಮಾಧಾನವಾಗಿಯೂ ನಿರ್ಭಯವಾಗಿಯೂ ಇರುತ್ತೇವೆಂದು ಜನರು ಹೇಳುತ್ತಿರುವಾಗಲೇ ಅವರ ಮೇಲೆ ನಾಶನವು ಗರ್ಭಿಣಿಗೆ ಪ್ರಸವವೇದನೆ ಬರುವ ಪ್ರಕಾರ ಬರುವುದು. ಅವರು ಹೇಗೂ ತಪ್ಪಿಸಿಕೊಳ್ಳಲಾರರು" (1 ಥೆಸ. 5:1–3).

ಮುಂದುವರಿಯುವದು......

**ಪಾ॥ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

# ಪ್ರಾರ್ಥನಾ ಸ್ವರ

**ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.**

**ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.**

**ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ. ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)**

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0091 820 2559886**

ನಿನ್ನ ಸೇವಕನಾದ ನನ್ನ ಮೇಲೆ ದಯವಿಡು; ಆಗ ಜೀವದಿಂದಿದ್ದು
ನಿನ್ನ ವಾಕ್ಯವನ್ನು ಕೈಕೊಳ್ಳುವೆನು (ಕೀರ್ತ. 119:17).

# ಎರಡನೇ ಬರೋಣ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಕರ್ತನಲ್ಲಿ ಭಕ್ತಿಯುಳ್ಳ ಅರಸರುಗಳಾದ ಯೋಷೀಯ, ಹಿಜ್ಕೀಯ ಮುಂತಾದ ಬೆರಳೆಣಿಕೆಯಷ್ಟು ಅರಸರ ಹೊರತು, ಬೇರೆ ಎಲ್ಲಾ ಯೆಹೂದ್ಯರ ಅರಸರು ದುರ್ಮಾರ್ಗಿಗಳಾಗಿ ಜೀವಿಸಿದರು. ಕೊನೆಯದಾಗಿ ಇಸ್ರಾಯೇಲ್ಯರಿಗಿಂತ ಯೆಹೂದ್ಯ ಅರಸರು ಬಹಳ ದುರ್ಮಾರ್ಗಿಗಳಾದರು. ಆದ್ದರಿಂದ ಕರ್ತನು ಅವರನ್ನು ಬಾಬಿಲೋನಿನ ಸೆರೆವಾಸಕ್ಕೆ ಒಪ್ಪಿಸಿಬಿಟ್ಟನು (2 ಅರಸು. 25:1).

10. ಬಾಬಿಲೋನಿನ ಸೆರೆವಾಸಕ್ಕೆ ಒಳಗಾದವರು ಒಳ್ಳೆಯ ಪಾಠ ಕಲಿತಿರಬಹುದೆಂದು ನಾವು ನೆನಸಬಹುದು. ಆದರೆ ಅವರು ಇನ್ನೂ ಅಧಿಕವಾದ ಕೇಡು, ಒರಟುತನ, ನಾಚಿಕೆ ಗೇಡಿತನ, ಹಠದ ಸ್ವಭಾವದವರು ಆಗಿದ್ದರೆಂದು ಸತ್ಯವೇದವು ಹೇಳುತ್ತದೆ (ಯೆಹೆ. 2:3–4).

ಸೆರೆವಾಸವನ್ನನುಭವಿಸಿದಾಗ್ಯೂ ಅವರು ಒಳ್ಳೆಯವರಾಗಲಿಲ್ಲ. ಏಕೆಂದರೆ ಸೆರೆಯಿಂದ ಹಿಂದಿರುಗಿ ಬಂದವರು ಅತಿ ಶೀಘ್ರವಾಗಿ ಕಾನಾನ್ಯರೊಂದಿಗೆ ಇನ್ನಿತರ ಅನ್ಯರೊಂದಿಗೆ ವಿವಾಹಸಂಬಂಧವನ್ನು ಬೆಳೆಸಿ ಕರ್ತನನ್ನು ಬಿಟ್ಟು ದೂರವಾದರು (ಎಜ್ರ. 9:10).

ನೆಹೆಮೀಯನ ನಾಯಕತ್ವದಲ್ಲಿ, ಇಸ್ರಾಯೇಲ್ಯರೆಲ್ಲರೂ ಧರ್ಮಶಾಸ್ತ್ರವನ್ನು ಕೈಗೊಳ್ಳುವದಾಗಿ ಒಡಂಬಡಿಕೆ ಮಾಡಿದರು (ನೆಹೆ. 9:1, 10:29). ಆದರೂ ಪುನ: ಅವರು ಅದನ್ನು ಮೀರಿ ಸಬ್ಬತ್ತನ್ನು ಕೈಕೊಳ್ಳದೆ, ಅನ್ಯರನ್ನು ವಿವಾಹಮಾಡಿಕೊಂಡು ಕರ್ತನನ್ನು ಬಿಟ್ಟು ದೂರವಾದರು (ನೆಹೆ. 13:15–30).

ಕೊನೆಯದಾಗಿ ಕರ್ತನು ಅವರನ್ನು ಎಚ್ಚರಿಸಲು ಮಲಾಕಿಯನನ್ನು ಕಳುಹಿಸಿದನು. ಅವರು ದೇವರ ಯಜ್ಞಪೀಠವನ್ನು ತುಚ್ಛೀಕರಿಸಿ, ಅಶುದ್ಧಪದಾರ್ಥಗಳನ್ನು ಕುರುಡಾದ, ಕುಂಟಾದ, ರೋಗದ ಪಶುಗಳನ್ನು ಯಜ್ಞವಾಗಿ ಅರ್ಪಿಸಿ, ದೋಷಿಗಳಾದರು. ಇದರಿಂದ ಕರ್ತನು ಮಲಾಕಿಯನ ಮೂಲಕ ಕಠಿಣವಾದ ಶಾಪವನ್ನು ಹೇಳಿಸಿದನು (ಮಲಾ. 1:7–14). ಯಾಜಕರು ಸಹ, ಕರ್ತನ ಆಜ್ಞೆಯನ್ನು ಕೈಕೊಳ್ಳದೆ ಹೋದರು. ಲೇವಿಯರು ಒಡಂಬಡಿಕೆಯನ್ನು ಮೀರಿದರು (ಮಲಾ. 2:7–15). ಕೊನೆಯದಾಗಿ, ಕರ್ತನನ್ನು ಸೇವಿಸಲು ಯಾರೂ ಯೋಗ್ಯರಲ್ಲ ಎಂದು ಎಲ್ಲರೂ ದೇವದ್ರೋಹಿಗಳೆಂದು ಖಂಡಿಸಲ್ಪಟ್ಟರು (ಮಲಾ. 3:7–14).

ಇಸ್ರಾಯೇಲ್ಯರ ಬಳಿ ಕೊನೆಯದಾಗಿ ಕಳುಹಿಸಲ್ಪಟ್ಟ ಪ್ರವಾದಿ ಮಲಾಕಿಯನು, ಅನಂತರದಲ್ಲಿ ಕರ್ತನು ತನ್ನ ಒಬ್ಬನೇ ಮಗನನ್ನು ಕಳುಹಿಸುವವರೆಗೆ ಕರ್ತನಾದ ಯೆಹೋವನು ಅವರನ್ನು ತೊರೆದು ಅವರಿಗೆ ಮರೆಯಾಗಿದ್ದನು. ಮಲಾಕಿಯನಿಗೂ ಕ್ರಿಸ್ತನಿಗೂ ಮಧ್ಯೆ ಅಂತರ 400 ವರ್ಷಗಳು. ಈ 400 ವರ್ಷಗಳಲ್ಲಿ ಪಾಲಿಸ್ತೀನ, ಪಾರಸಿಯಾ (ಈಗಿನ ಇರಾನ್) ಸಿರಿಯಾ ದೇಶಗಳೆಲ್ಲವೂ ರೋಮನ್ನರ ಸಾಮ್ರಾಜ್ಯಕ್ಕೆ ಅಧೀನವಾಯಿತು. ಸಿರಿಯನ್ನರ ರಾಜನಾದ ಅಂಟಿಯೋಕ್ಸ್ ಎಬಿಬಾನಸ್ ಎಂಬವನ ಆಳ್ವಿಕೆಗೆ ಒಳಗಾಗಿದ್ದ ಕಾಲದಲ್ಲಿ ಕ್ರಿ. ಪೂರ್ವ 175ರಿಂದ 164ರವರೆಗೆ ಯೆಹೂದ್ಯರಲ್ಲಿ ಮತ್ತಿಯಾಸ್ ಎಂಬ ಯಾಜಕನ ಮಕ್ಕಳು ಇದ್ದರು. ಈ ಏಳುಮಂದಿ ಕುಮಾರರಲ್ಲಿ ಯೂದಾಸ್ ಮಕ್ಕಬೀರ್ ಎಂಬವನು, ದೇವಭಕ್ತಿಯುಳ್ಳ ಯೆಹೂದ್ಯರನ್ನು, ಆಂಟಿಯೋಕ್ಸನಿಗೂ ಅವನ ದುರಾಲೋಚನೆಗೂ ವಿರೋಧವಾಗಿ ನಡೆಸಿದನು. ಈ ಅಂಟಿಯೋಕ್ಸನು ಯೆಹೂದ್ಯರನ್ನು ವಿಗ್ರಹಾರಾಧನೆಗೂ, ನಾಶಕ್ಕೂ, ಅಸಹ್ಯವಾದ ಕಾರ್ಯಗಳಿಗೂ ತಿರುಗಿಸಿದನು. ಅಷ್ಟೇ ಅಲ್ಲದೆ ಪವಿತ್ರ ಸ್ಥಳದಲ್ಲಿ ಹಂದಿಗಳನ್ನು ಸಮರ್ಪಿಸಿದನು. ಅನೇಕರು ಹಿಂಜಾರಿ ಹೋದರು. ಮಕ್ಕಬೀರ್ ಎಂಬ ಮಕ್ಕಬೇಯರ ಹೋರಾಟದಲ್ಲಿ ಯೆಹೂದ್ಯರಿಗೆ ಸ್ವಂತ ರಾಜ್ಯವು ಸ್ಥಾಪನೆಯಾಯಿತು. ಆದಾಗ್ಯೂ ಕ್ರಿಸ್ತನು ಬಂದಾಗ ಅವರು ರೋಮಾಯರ ಆಳ್ವಿಕೆಗೆ ಒಳಗಾಗಿದ್ದರು. ಕ್ರಿಸ್ತನ ಕಾಲದಲ್ಲಿ ಅವರು ವಂಚನೆಯುಳ್ಳವರಾಗಿಯೂ, ಅಹಂಭಾವ, ಗರ್ವವುಳ್ಳವರಾಗಿಯೂ ಇದ್ದರು. ಕೊನೆಯದಾಗಿ ಮೆಸ್ಸೀಯನನ್ನು ಕೊಲೆಗೈದ ಭಯಂಕರ ಪಾಪವನ್ನು ಸಂಪಾದಿಸಿಕೊಂಡರು.

ಕ್ರಿ.ಪೂ. 70ನೇ ವರ್ಷ ತೀತಚಕ್ರವರ್ತಿಯ ನಾಯಕತ್ವದಲ್ಲಿ ನಡಿಸಲ್ಪಟ್ಟ ಸೈನ್ಯವು ಯೆರೂಸಲೇಮನ್ನು ನಾಶಗೊಳಿಸಿತು. ಇದು ಯೆಹೂದ್ಯರಿಗೆ ಬಂದಂಥ ದೇವದಂಡನೆ. ಆ ಸಮಯದಲ್ಲಿ ಹತ್ತು ಲಕ್ಷ (10,00,000) ಜನರು ಸಂಹರಿಸಲ್ಪಟ್ಟರು. 97,000 ಜನರನ್ನು ಸೆರೆಹಿಡಿದರು. ಯೆರೂಸಲೇಮಿನ ದೇವಾಲಯವನ್ನು ಒಡೆದು ಅದರಲ್ಲಿದ್ದಂಥ ಸಕಲ ಸಂಪತ್ತನ್ನೂ ಸೂರೆಮಾಡಿದರು. ಕುದುರೆಗಳ ಬಾಯಲ್ಲಿ ಖಡ್ಗಗಳನ್ನು ಕಟ್ಟಿ ಅವುಗಳನ್ನು ಓಡಿಸಿದ್ದರಿಂದ, ಹೇರಳವಾದ ಜನರು ಸಂಹಾರವಾದರು.

ನಾನು ಭೂಲೋಕದಲ್ಲಿ ಪ್ರವಾಸಿಯಾಗಿದ್ದೇನೆ; ನಿನ್ನ ಆಜ್ಞೆಗಳನ್ನು ನನಗೆ ಮರೆಮಾಡಬೇಡ (ಕೀರ್ತ. 119:19).

ಯೆರೂಸಲೇಮನ್ನು ನಾಲ್ಕು ತಿಂಗಳು ಮುತ್ತಿಗೆ ಹಾಕಿದರು. ಅವರು ಆಹಾರವಿಲ್ಲದೆ ಪರಿತಪಿಸಿದರು. ಕುದುರೆ, ನಾಯಿ, ಕತ್ತೆ ಮೊದಲಾದುವನ್ನು ತಿಂದರು. ಅದರ ನಂತರ ಅವುಗಳ ಚರ್ಮಗಳನ್ನು ತಿಂದರು, ನಂತರ ಮರದ ಚಕ್ಕೆಯನ್ನು ಸುಲಿದು ತಿಂದು ಕೊನೆಗೆ ತಮ್ಮ ಸ್ವಂತ ಮಕ್ಕಳನ್ನು ಕೊಯ್ದು ತಿಂದರು. ಇದೆಲ್ಲವೂ ಸಾಲದೆಂಬಂತೆ ದೇವರು ಯೆಹೂದ್ಯರ ಮೇಲಿನ ಕ್ರೋಧದಿಂದ ಅವರನ್ನು ಪುನ: ಸಂಹರಿಸಿದನು. "ನೀವು ಶತ್ರುಗಳಿಂದ ಪರಾಜಯವನ್ನು ಹೊಂದುವಂತೆ ಯೆಹೋವನು ಮಾಡುವನು; ನೀವು ಒಂದೇ ದಾರಿಯಿಂದ ಅವರೆದುರಿಗೆ ಹೋಗಿ ಏಳು ದಾರಿಗಳಿಂದ ಓಡಿಹೋಗುವಿರಿ. ಲೋಕದ ಎಲ್ಲಾ ರಾಜ್ಯಗಳವರೂ ಇದನ್ನು ಕಂಡು ಬೆರಗಾಗುವರು. ನಿಮ್ಮ ಹೆಣಗಳು ಪಕ್ಷಿಗಳಿಗೂ, ಕಾಡು ಮೃಗಗಳಿಗೂ ಆಹಾರವಾಗುವುದು" (ಧರ್ಮೋ. 28:25). ಎಂದು ಹೇಳಿರುವ ಪ್ರಕಾರ ಯೆಹೂದ್ಯರು ಭೂಲೋಕದ ಎಲ್ಲಾ ಭಾಗಗಳಿಗೂ ಚದರಿಸಲ್ಪಟ್ಟರು.

ಈ ರೀತಿಯಾಗಿ ಧರ್ಮಶಾಸ್ತ್ರದ ಕಾಲದಲ್ಲಿ ಮಾನವನು ಚೇತರಿಸಿಕೊಳ್ಳಲಾರದಂಥಾ ಬೀಳುವಿಕೆಗೆ ಗುರಿಯಾದನು. ಪಾಪವನ್ನು ಗ್ರಹಿಸುವ ಮನೋಭಾವ ಧರ್ಮಶಾಸ್ತ್ರದ ಮೂಲಕ ಉಂಟಾಯಿತು. ಧರ್ಮಶಾಸ್ತ್ರವು ಯಾವ ಒಂದನ್ನೂ ಪೂರ್ಣಗೊಳಿಸಲಿಲ್ಲ. "ಧರ್ಮಶಾಸ್ತ್ರವು ಯಾವದನ್ನೂ ಸಿದ್ಧಿಗೆತಾರದೆ ಇರುವದರಿಂದ (ಇಬ್ರಿ. 7:19) ಧರ್ಮಶಾಸ್ತ್ರವು ನಮ್ಮನ್ನು ಕಾಯುವ ಆಳಿನಂತಾಗಿದೆ. ನಾವು ನಂಬಿಕೆಯಿಂದ ನೀತಿವಂತರೆಂಬ ನಿರ್ಣಯವನ್ನು ಹೊಂದುವದಕ್ಕಾಗಿ ಕ್ರಿಸ್ತನಲ್ಲಿ ಸೇರುವ ತನಕ ಅದು ನಮ್ಮನ್ನು ಕಾಯುತ್ತದೆ (ಗಲಾ. 3:24).

ಹೇಗಂದರೆ, ಶರೀರಾಧೀನ ಸ್ವಭಾವದ ನಿಮಿತ್ತ ನಿರ್ಬಲವಾಗಿ ಯಾವ ಕೆಲಸವನ್ನೂ ಮಾಡಲಾರದೆ ಇತ್ತೋ ಅದನ್ನು ದೇವರೇ ಮಾಡುವಂತೆ, ಪಾಪನಿವಾರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟು ನರಭಾವದಲ್ಲಿಯೇ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿದನು. ಹೀಗಿರಲು ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮನುಸಾರವಾಗಿ ನಡೆಯುವವರಾದ ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು ನೆರವೇರುವುದಕ್ಕೆ ಮಾರ್ಗವಾಯಿತು (ರೋಮ. 8:34). ಈ ರೀತಿಯಾಗಿ ದೇವಕುಮಾರನಾದ ಯೇಸುಕ್ರಿಸ್ತನು ಕಲ್ವಾರಿ ಶಿಲುಬೆಯಲ್ಲಿ ಜಡಿಯಲ್ಪಟ್ಟು, ಸತ್ತದ್ದರಿಂದ ಪಾಪದ ಸಂಬಳ ಮರಣ ಎಂಬ ದಂಡನೆಯ ನಿಯಮ ಬದಲಾಗಿ ಧರ್ಮಶಾಸ್ತ್ರದ ಯುಗ ಮುಗಿಯಿತು.

ಬಾಬಿಲೋನಿನ ಮಾರ್ಗದ ಸಕಲ ಅಸಹ್ಯವಾದ, ಮಲೀನವಾದ ವೇಷಗಳೆಲ್ಲಾ ಹೊಸ ರೂಪತಾಳಿ ರೋಮಾಯ ಸಭೆಗಳ ಮೂಲಕ ಕ್ರೈಸ್ತ ಮಾರ್ಗದೊಳಗೆ ನುಸುಳಿಕೊಂಡಿತು. ಆದರೆ ಕರ್ತನು ತನ್ನ ಸಭೆಯನ್ನು ಅದರಿಂದ ಬೇರ್ಪಡಿಸಿ ಮದಲಿಂಗನಿಗಾಗಿ ಸಿದ್ಧಗೊಳಿಸುವ ಸಲುವಾಗಿ ಆದಿಕಾಲದಂತೆ ಪವಿತ್ರಾತ್ಮನ ಹಿಂಗಾರನ್ನು ಸುರಿಸಿ ಕ್ರಿಯೆ ನಡಿಸುತ್ತಿರುವನು.

1. **ಕೃಪೆಯ ಯುಗ** : (ಕೃಪೆಯ ಕಾಲ) ಕಲ್ವಾರಿ ಕ್ರೂಜೆಯ ಮರಣದಿಂದ ಸಾವಿರ (1000) ವರ್ಷದ ಆಳ್ವಿಕೆಯವರೆಗೆ ಕೃಪೆಯ ಯುಗ.

ಧರ್ಮಶಾಸ್ತ್ರದ ಯುಗದ (ಕಾಲದ) ಅಂತ್ಯದಲ್ಲಿ ಪ್ರವಾದಿಯಾದ ಸ್ನಾನಿಕನಾದ ಯೋಹಾನನು ಬಂದನು. ಧರ್ಮಶಾಸ್ತ್ರದ ಕಾಲವನ್ನೂ, ಕೃಪೆಯ ಕಾಲವನ್ನೂ ಯೇಸುಕ್ರಿಸ್ತನು ಒಂದು ಗೂಡಿಸಿದನು. ಯೇಸುಕ್ರಿಸ್ತನು, ಆತನಿಗೆ ಮೊದಲು ಬಂದ ದೂತನಾದ ಯೋಹಾನ. ಇವರ ಬರೋಣವನ್ನು ಕುರಿತು ಧರ್ಮಶಾಸ್ತ್ರವು ಕೊನೆಯಲ್ಲಿ ಅಂದರೆ ಹಳೆಯ ಒಡಂಬಡಿಕೆಯಲ್ಲಿ ಹೇಳಲಾಗಿದೆ (ಮಲಾ. 3:1). ಈ ಪ್ರವಾದನೆಯನ್ನು ನೆರವೇರಿಸುವಂತೆ ಯೋಹಾನನು, ಕ್ರಿಸ್ತನು ಬಂದು ಧರ್ಮಶಾಸ್ತ್ರಕಾಲದ (ಯುಗದ) ಅಂತ್ಯದಲ್ಲಿ ಕೃಪೆಯ ಯುಗದ ಮಾರ್ಗವನ್ನು ಸಿದ್ಧಗೊಳಿಸಿದರು.

ಚಕ್ರವರ್ತಿಯಾದ ತಿಬೇರಿಯನು ಪಟ್ಟಕ್ಕೆ ಬಂದ ಕಾಲ ಪೊಂತ್ಯ ಪಿಲಾತನು ಯೂದಾಯಕ್ಕೆ ಅಧಿಪತಿಯೂ ಹೆರೋದನು ಗಲಿಲಾಯಕ್ಕೆ ಉಪರಾಜನೂ ಅವನ ತಮ್ಮನಾದ ಫಿಲಿಪ್ಪನು ಇತುರಾಯ ತ್ರಕೋನೀತಿ ಸೀಮೆಗಳಿಗೆ ಉಪರಾಜನೂ ಲುಸನ್ಯನು ಅಭಿಲೇನೆಗೆ ಉಪರಾಜನೂ ಆಗಿರುವಲ್ಲಿ ಅನ್ನನೂ ಕಾಯಫನೂ ಮಹಾಯಾಜಕರಾಗಿದ್ದ ಕಾಲದಲ್ಲಿ ಜಕರೀಯನ ಮಗನಾದ ಯೋಹಾನನಿಗೆ ಅಡವಿಯಲ್ಲಿ ದೇವರ ವಾಕ್ಯವುಂಟಾಯಿತು (ಲೂಕ. 3:2). ಮಲಾಕಿಯನ ತರುವಾಯ ಸುಮಾರು 400 ವರ್ಷಗಳ ನಂತರ ಯೆಹೂದ್ಯರ ಹೋರಾಟದ ಅಂತ್ಯದಲ್ಲಿ, ಕ್ರಿಸ್ತನಿಗೆ ದಾರಿಯನ್ನು ಸಿದ್ಧಗೊಳಿಸಲು ಸ್ನಾನಿಕನಾದ ಯೋಹಾನನು ಕಳುಹಿಸಲ್ಪಟ್ಟನು.

ಆಗ ಪಾಲಸ್ತೀನ ದೇಶದಲ್ಲಿ ಮತಸಂಬಂಧವಾದ ಕಾರ್ಯಗಳಿಗೆ ಇಬ್ರಿಯ ಭಾಷೆಯೂ, ರಾಜಕೀಯ ಕಾರ್ಯಗಳಿಗೆ ರೋಮಾಯ ಭಾಷೆಯೂ (ಲ್ಯಾಟಿನ್) ಸಾಹಿತ್ಯ ಭಾಷೆಯಾಗಿ (ಕಾವ್ಯಭಾಷೆ) ಗ್ರೀಕ್ ಭಾಷೆಯೂ,

ನನ್ನ ಪ್ರಾಣವು ಧೂಳಿನಲ್ಲಿ ಸೇರಿಹೋಗುತ್ತದೆ; ನಿನ್ನ ವಾಗ್ದಾನಕ್ಕನುಸಾರವಾಗಿ
ನನ್ನನ್ನು ಉಜ್ಜೀವಿಸ ಮಾಡು (ಕೀರ್ತ. 119:25).

ಆಡುಭಾಷೆಯಾಗಿ ಅರೇಬಿಯಾ (ಸಿರಿಯನ್) ಭಾಷೆಯೂ ಜಾರಿಯಲ್ಲಿದ್ದಿತು. ಕೃಪೆಯ ಯುಗಕ್ಕೆ ಜನರನ್ನು ಸಿದ್ಧಗೊಳಿಸುವಂತೆ ಯೋಹಾನನು ಮೊಟ್ಟಮೊದಲಿಗೆ "ದೇವರ ಕಡೆಗೆ ತಿರುಗಿಕೊಳ್ಳಿರಿ" ಎಂಬ ಸಂದೇಶವನ್ನು ಸಾರತೊಡಗಿದನು.

ಕ್ರಿಸ್ತೇಸುವಿನ ಮರಣದ ನಂತರ ಪಂಚಾಶತ್ತಮದಿನದಂದು ಸಭೆಯು ಸ್ಥಾಪನೆಯಾಯಿತು. ಅದುವರೆಗೆ ಇದ್ದಂಥ ಅಧಿಕವಾದ ಕಾರ್ಯಗಳ ಸಾರಾಂಶವು ಕೃಪಾಯುಗದಲ್ಲಿ ನೆರವೇರಿಸಲ್ಪಡುತ್ತಿದೆ. ಅದನ್ನು ನೆರವೇರಿಸುವಾತನು ಕ್ರಿಸ್ತನೇ. ಪೂರ್ವದಲ್ಲಿ ಮೂಲಪಿತೃಗಳಿಗೂ, ಪ್ರವಾದಿಗಳಿಗೂ ಪ್ರಕಟವಾಗದೆ ಇದ್ದಂಥ ಒಂದು ರಹಸ್ಯ ಅಂದರೆ ಮರೆಯಾಗಿದ್ದ ಒಂದು ಮರ್ಮ, ಕೃಪಾಯುಗದ ಕಾರ್ಯವೇ ಆಗಿದೆ. ಕೃಪೆಯಿಂದಲೇ ರಕ್ಷಣೆಯು ಉಚಿತವಾಗಿ ದೊರೆತಿದ್ದರಿಂದ ಅದನ್ನು ಕೃಪಾಯುಗ ಎನ್ನುತ್ತೇವೆ. ಇದು ಕ್ರಿಸ್ತನ ಮಾನವ ಜನನ, ಶಿಲುಬೆಯ ಮರಣ, ಪುನರುತ್ಥಾನ ಇವುಗಳ ಮೂಲಕ ಸಿಗುವಂಥಾ ಭಾಗ್ಯ.

ಕ್ರಿಸ್ತೇಸುವಿನ ಮರಣದ ಮೂಲಕ ದೇವರು ಮಾನವನೊಂದಿಗೆ ಕೃಪೆಯಿಂದ ಸಂಪರ್ಕಿಸುವ ಕಾರ್ಯ ಸಾಧ್ಯವಾಯಿತು. ಈ ಮರಣದಿಂದ ದೇವರ ಬಳಿಗೆ ಪ್ರವೇಶಿಸುವ ಜೀವವುಳ್ಳ ಹೊಸದಾರಿ ನಮಗೆ ಉಂಟಾಯಿತು (ಇಬ್ರಿ. 10:19). ಕ್ರಿಸ್ತನು ಸತ್ತಾಗ ದೇವಾಲಯದ ತೆರೆ ಇಬ್ಭಾಗವಾಗಿ ಹರಿದು ಹೋದದ್ದರಿಂದ, ಹಳೆಯ ಧರ್ಮವಿಧಿಗಳು, ಅನುಷ್ಠಾನಗಳೆಲ್ಲಾ ನೀಗಿಸಲ್ಪಟ್ಟು ನಾವು ನೇರವಾಗಿ ದೇವರೊಂದಿಗೆ ಅನ್ಯೋನ್ಯವಾಗಿರುವ ಶ್ರೇಷ್ಠತೆ ದೊರೆಯಿತು (ಮತ್ತಾ. 27:51).

ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿ ಮುಗಿಸಿದ ಎಲ್ಲಾ ಕಾರ್ಯದ ಉದ್ದೇಶವನ್ನು ಅನುಭವದಲ್ಲಿ ಕಾರ್ಯರೂಪಕ್ಕೆ ತರಲು ಪವಿತ್ರಾತ್ಮನು ಬಂದನು (ಅ.ಕೃ. 1:8, 2:1).

ಧರ್ಮಶಾಸ್ತ್ರದ ಎಲ್ಲಾ ಕಾರ್ಯವನ್ನು ಪರಿಪೂರ್ಣವಾಗಿ ನೆರವೇರಿಸಿ, ಪಾಪನಿವಾರಣಾರ್ಥವಾಗಿ ಅರ್ಪಿಸಲ್ಪಟ್ಟು ಸತ್ತನು. ಆತನು ನಮ್ಮ ಪಾಪಗಳನ್ನು ನಿವಾರಣ ಮಾಡುವ ಯಜ್ಞವಾಗಿದ್ದಾನೆ (ಮತ್ತಾ. 5:17, 1. ಯೋಹಾ. 2:2). ಆತನಲ್ಲಿ ಯಾವ ಪಾಪವೂ ಇಲ್ಲದ್ದರಿಂದ ಪಾಪದ ದಂಡನೆಯಾದ ಮರಣವು ಆತನನ್ನು ಹಿಡಿದಿಡುವದಕ್ಕೆ ಬಲವಿಲ್ಲವಾಯಿತು. ಆದ್ದರಿಂದಲೇ ಮೂರನೇ ದಿನದಲ್ಲಿ ಪುನರುತ್ಥಾನ ಹೊಂದಿ, ಮಹಿಮೆಯುಳ್ಳ ಮಾನವ ಶರೀರದೊಂದಿಗೆ ಕೃಪಾಸನದ ಬಳಿ ಸೇರಿದನು.

ದೇವರು ಮನುಷ್ಯರ ಅಪರಾಧಗಳನ್ನು ಅವರ ಲೆಕ್ಕಕ್ಕೆ ಹಾಕದೆ ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನ ಪಡಿಸಿಕೊಂಡನು (2 ಕೊರಿ. 5:19). ಯೇಸುಕ್ರಿಸ್ತನು ನಮಗೋಸ್ಕರ ನಿತ್ಯ ವಿಮೋಚನೆಯನ್ನು ಸಂಪಾದಿಸಿಕೊಂಡವನಾಗಿ ಒಂದೇ ಸಾರಿ ದೇವರ ಸನ್ನಿಧಾನಕ್ಕೆ ಸೇರಿದವನಾದನು (ಇಬ್ರಿ. 9:12). ಈ ರಕ್ಷಣೆಯು ಎಲ್ಲರೂ ಪಡೆದುಕೊಳ್ಳಬೇಕಾದದ್ದು. ಕ್ರಿಸ್ತನಲ್ಲಿ ನಂಬಿಕೆಯಿಟ್ಟು, ಆತನನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವವರಿಗೆ ಮಾತ್ರವೇ ಇದರ ಫಲಗಳು ಸ್ವಾಸ್ಥ್ಯವಾಗುವದು (ಇಬ್ರಿ. 2:9, 1 ಯೋಹಾ. 2:2, ಯೋಹಾ. 1:12).

ಕರ್ತನು ದುರ್ಮಾಗಿಗಳ ಮರಣವನ್ನು ಬಯಸುವದಿಲ್ಲ, ಒಬ್ಬರಾದರೂ ಕೆಟ್ಟುಹೋಗದೆ ಎಲ್ಲರೂ ರಕ್ಷಣೆ ಹೊಂದಬೇಕೆಂದು ಬಯಸುತ್ತಾನೆ. ಆತನು ತನಗಾಗಿ ಒಂದು ಗುಂಪು ಜನರನ್ನು ಪ್ರಪಂಚದಿಂದ ಕರೆಯಲು ಚಿತ್ತವುಳ್ಳಾತನಾಗಿದ್ದಾನೆ. ಅದೇ ಹೊಸ ಒಡಂಬಡಿಕೆಯ ಸಭೆ.

ಸಭೆ ಎಂಬುದಕ್ಕೆ ಗ್ರೀಕ್ ಪದದಲ್ಲಿ "ಎಕ್‌ಲೀಷಿಯಾ" ಎನ್ನುವರು. ಅಂದರೆ ಹೊರಗೆ ಕರೆತರಲ್ಪಟ್ಟ ಕೂಟ ಎಂದು ಅರ್ಥ. ತನ್ನ ಕರೆಗೆ, ಆಗಲಿ ಎಂದು ಉತ್ತರ ಹೇಳುವ ಒಂದು ಕೂಟದವರನ್ನು ಬರಲಿರುವ ತನ್ನ ರಾಜ್ಯಕ್ಕೆ ಯೋಗ್ಯರಾಗುವಂತೆ ಸುವಾರ್ತೆಯು ಶುಭಸಂದೇಶವನ್ನು ಸಾರಿ ಅವರನ್ನು ಲೋಕದೊಳಗಿಂದ ಹೊರಗೆ ಬರುವಂತೆ ಆತನು ಕರೆಕೊಡುತ್ತಾನೆ. (ಅ.ಕೃ. 15:14–17), ರೋಮ. 1:16, 1 ಕೊರಿ. 1:21).

ಈ ರೀತಿಯಲ್ಲಿ ದೇವರಾದ ಕರ್ತನು ಕೃಪೆಯ ಶಾಸ್ತ್ರದಿಂದ ಪಾಪದ ಸಂಬಳವಾದ ಮರಣದಂಡನೆಯಿಂದ ಜನರನ್ನು ವಿಮೋಚಿಸಿಕೊಂಡನು. ಈ ಕೃಪೆಯು ಸತತವಾಗಿ ಕ್ರಿಯೆ ಮಾಡುತ್ತದೆ. ಈ ಕೃಪಾಯುಗವು ಸಾವಿರ ವರ್ಷಗಳ ಆಡಳಿತದವರೆಗೆ ಸಾಗುವದು. ಆದರೆ ಸಭೆಯು ಎತ್ತಲ್ಪಟ್ಟನಂತರ ಅನ್ಯಜನರಿಗೆ ರಕ್ಷಣೆ ಇಲ್ಲ.

ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಳಿಗೆ ಸೇರಿಸುತ್ತಿದ್ದನು. ಈ ವಿಧವಾದ ರಕ್ಷಣೆ ಹೊಂದಿದ ಸಭೆಯನ್ನು ಸಂಧಿಸಲು ಕರ್ತನು ಬರುವನು.

ಸಂಗ್ರಹ.

ಯೆಹೋವನೇ, ನಿನ್ನ ನಿಬಂಧನೆಗಳ ಮಾರ್ಗವನ್ನು ಉಪದೇಶಿಸು;
ಕಡೇತನಕ ಅದರಲ್ಲಿಯೇ ನಡೆಯುವೆನು (ಕೀರ್ತ. 119:13).

# ಹೃದಯ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

ಈ ಲೋಕದ ಜ್ಞಾನದಿಂದ ನಮಗೆ ಚಂಚಲತೆ ಉಂಟಾಗಬಹುದು ಆದರೆ ಪರಲೋಕದಿಂದ ಬರುವ ಜ್ಞಾನದಿಂದ ಚಂಚಲ, ಕಪಟವಿರುವುದಿಲ್ಲ (ಯಾಕೋ. 3:17).

"ಚಂಚಲನು ದೇವರಿಂದ ಏನನ್ನು ಹೊಂದದೆ ಹೋಗುವನು" (ಯಾಕೋ. 1:6). ಆದರೆ ಪ್ರಿಯ ದೇವ ಮಗುವೆ, ನಿನ್ನ ಹೃದಯ ದೃಢವಾಗಿರಲಿ, ನಿನ್ನ ತೀರ್ಮಾನಗಳು ದೃಢವಾಗಿರಲಿ. ದಾನಿಯೇಲನು ಬರೆಯುತ್ತಾನೆ, "ತಮ್ಮ ದೇವರನ್ನು ಅರಿತವರೋ ದೃಢಚಿತ್ತರಾಗಿ ಕೃತಾರ್ಥರಾಗುವರು" (ದಾನಿ. 11:32). 'ಕ್ರಿಸ್ತನಂಬಿಕೆಯಲ್ಲಿ ದೃಢವಾಗಿ ನಿಲ್ಲಿರಿ' (2 ಕೊರಿ. 16:13). ದಾವೀದನು ಬರೆಯುತ್ತಾನೆ, "ದೇವರೇ ನನ್ನ ಹೃದಯವು ಸ್ಥಿರವಾಗಿದೆ. ನಾನು ಬಾರಿಸುತ್ತಾ ಹಾಡುವೆನು. ನನ್ನ ಅಂತರಂಗವೂ ಸಹ". (ಕೀರ್ತ. 108:1). 'ಇಂದು ಅನೇಕರು ಚಂಚಲ ಮನಸ್ಸುಳ್ಳವರಾಗಿ ದೇವರ ಚಿತ್ತವಿಲ್ಲದೆ ಸಭೆಗಳನ್ನು ಬಿಟ್ಟು ಸಭೆಗೆ ಹೋಗಿ ತಿರುಗಾಡಿ ಕೊನೆಯಲ್ಲಿ ಬಿದ್ದು ಹೋಗಿರುತ್ತಾರೆ. ಕೆಲವರು ದರ್ಶನವಿಲ್ಲದೆ ತಾನೂ ಸೇವೆ ಮಾಡುತ್ತೇನೆಂದು ಹೇಳಿ ತಾನೊಂದು ಸಭೆಯಲ್ಲಿರುವಾಗಲೇ ಟೀ ಅಂಗಡಿ ತೆರೆದಾಗೇ ಚಿಕ್ಕದಾಗಿ ಸಭೆ ತೆರೆದು ನಾಲ್ಕಾರು ದಿನ ನಡಿಸಿ ಆ ನಂತರ ಮುಚ್ಚಿ ಬಿಟ್ಟು ಆ ಕಡೆಗೂ ಇಲ್ಲ, ಈ ಕಡೇಗೂ ಇಲ್ಲ ಎಂಬಂತೆ ಇರುವರು. "ಪರಲೋಕದಲ್ಲಿರುವ ನನ್ನ ತಂದೆಯು ನೆಡದೆ ಇರುವ ಗಿಡಗಳೆಲ್ಲಾ ಬೇರಿನೊಂದಿಗೆ ಕಿತ್ತು ಹಾಕಲ್ಪಡುವುದು" (ಮತ್ತಾ. 15:13).

**ವಯಸ್ಕರ ಸ್ವರ**

ಪ್ರಿಯ ದೇವಮಗುವೇ, ಒಂದು ವೇಳೆ ದೇವರು ನಿನಗೆ ನಿಜವಾಗಿಯೂ ದರ್ಶನ ಕೊಟ್ಟಿರುವುದಾದರೆ ನಿನ್ನ ಸಭೆಯ ಪಾಲಕರ ಮೂಲಕವೇ ಸೇವೆಗೆ ನೇಮಿಸಿ ಕರ್ತನಿಗಾಗಿ ಉಪಯೋಗಿಸಲ್ಪಡುವಿ. ಚಂಚಲನಾಗದೆ ದೇವರ ತೀರ್ಮಾನಕ್ಕೆ ಕಾದಿರು. ಸೇವೆಗೆ ಕರೆ, ದರ್ಶನ ಕೊಟ್ಟಿರುವ ದೇವರೇ ನಿನ್ನನ್ನು ಪ್ರತ್ಯೇಕ್ಷಿಸಲು, ಹೊರ ಪ್ರಕಟಿಸಲು, ನೆಲೆಗೊಳಿಸಲು ಶಕ್ತನು. "ನೀವು ಈ ಹೊತ್ತು ದೇವರ ಶಬ್ಧಕ್ಕೆ ಕಿವಿಗೊಟ್ಟರೆ ನಿಮ್ಮ ಹೃದಯಗಳನ್ನು ಕಠಿಣಮಾಡಿಕೊಳ್ಳಬೇಡಿರಿ" (ಇಬ್ರಿ. 4:7). "ಯೇಸು ಸಬ್ಬತ್ ದಿನದಲ್ಲಿ ಕೈ ಬತ್ತಿದವನನ್ನು ಬಿಡುಗಡೆ ಮಾಡಿದರು. ಅನೇಕರು ಸಂತೋಷ ಪಡುವುದನ್ನು ಬಿಟ್ಟು ಕಠಿಣ ಹೃದಯವುಳ್ಳವರಾಗಿ ಆತನ ಮೇಲೆ ತಪ್ಪು ಹೊರಿಸಲು ಮುಂದಾದರು" (ಮಾರ್ಕ. 3:1–5). 'ಈ ದಿನಗಳಲ್ಲಿ ಕಷ್ಟದಲ್ಲಿರುವಾಗ ಯಾರು ನಮ್ಮ ಸಹಾಯಕ್ಕೆ ಬರುವುದಿಲ್ಲ, ಸಹಾಯನೂ ಮಾಡುವುದಿಲ್ಲ ಆದರೆ ನಾವು ಬಿಡುಗಡೆ ಹೊಂದಿ, ಸಮಾಧಾನ ಹೊಂದಿ ನೆಮ್ಮದಿಯಲ್ಲಿರುವಾಗ ಅದನ್ನು ಕೆಡಿಸಲು ಬಹಳಷ್ಟು ಕಠಿಣ ಹೃದಯವುಳ್ಳವರಾಗಿರುತ್ತಾರೆ. "ಅವರು ತಮ್ಮ ಹೃದಯದ ಕಾಠಿಣ್ಯದ ನಿಮಿತ್ತದಿಂದಲೂ ತಮ್ಮಲ್ಲಿರುವ ಅಜ್ಞಾನದ ನಿಮಿತ್ತದಿಂದಲೂ ದೇವರಿಂದಾಗುವ ಜೀವಕ್ಕೆ ಅನ್ಯರಾಗಿದ್ದಾರೆ" (ಎಫೆ. 4:18). "ಅವರು ನನ್ನ ನಿಯಮಗಳನ್ನು ಅನುಸರಿಸಿ ನನ್ನ ವಿಧಿಗಳನ್ನು ಕೈಕೊಂಡು ನೆರವೇರಿಸಲಿ ಎಂದು ನಾನು ಅವರಿಗೆ ಒಂದೇ ಮನಸ್ಸನ್ನು ದಯಪಾಲಿಸಿ ನೂತನ ಸ್ವಭಾವವನ್ನು ಅವರಲ್ಲಿ ಹುಟ್ಟಿಸುವೆನು; ಕಲ್ಲಾದ ಹೃದಯವನ್ನು ಅವರೊಳಗಿಂದ ತೆಗೆದು ಮೃದುವಾದ ಹೃದಯವನ್ನು ಅವರಿಗೆ ಅನುಗ್ರಹಿಸುವೆನು; ಅವರು ನನಗೆ ಪ್ರಜೆಯಾಗಿರುವರು, ನಾನು ಅವರಿಗೆ ದೇವರಾಗಿರುವೆನು" (ಯೆಹೆ. 11:19–20).

7) **ನೊಂದ ಹೃದಯ** :– ದೇವರು ಹೃದಯದಲ್ಲಿ ನೊಂದನು (ಆದಿ. 6:6). ಹೃದಯದಲ್ಲಿ ನೋವು ತುಂಬಿರುವುದಾದರೆ ನಮ್ಮ ಮಾತಿನಲ್ಲಿ ಪ್ರಕಟವಾಗುವುದು. ಹೊರಗಡೆ ಆಗುವ ಗಾಯುವು ವಾಸಿಯಾಗಬಹುದು ಆದರೆ ಹೃದಯಕ್ಕೆ ಆಗುವ ಗಾಯವು ವಾಸಿಯಾಗಲು ಸಾಧ್ಯನಾ? "ಆತ್ಮವು ವ್ಯಾಧಿಯನ್ನು ಸಹಿಸಬಲ್ಲದು ಆತ್ಮವೇ ನೊಂದರೆ ಸಹಿಸುವವರು ಯಾರು? ಮುರಿದ ಹೃದಯವನ್ನು ವಾಸಿಮಾಡಿ ಗಾಯವನ್ನು ಕಟ್ಟುವವನೇ ನಮ್ಮ ಕರ್ತನಾದ ಯೇಸು" (ಕೀರ್ತ. 147:3). ಹೆಚ್ಚಾಗಿ ಅನೇಕರ ಕಠಿಣವಾದ ಚುಚ್ಚು ಮಾತುಗಳ ಮೂಲಕ ನಮ್ಮ ಹೃದಯ ಗಾಯವಾಗುವುದು. ಕೆಲವರು ಹಿಂದೆ ಮುಂದೆ ನೋಡದೆ ಮಾತನಾಡಿ ಬಿಡುವರು ಆದರೆ ಆ ವ್ಯಕ್ತಿಯ ಹೃದಯ ಎಷ್ಟು ನೋವುಬಹುದು? ಎಂದು ತಿಳಿಯುವುದಿಲ್ಲ. ದೇವರು ತನ್ನ ಸ್ವರೂಪದಲ್ಲಿ ಮನುಷ್ಯನನ್ನು ಉಂಟು ಮಾಡಿದನು ಆದರೆ ಮನುಷ್ಯನು ತಿರುಗಿ ಬಿದ್ದು ದೇವರನ್ನು ನೋಯಿಸಿದನು. ದೇವರು ತಾನು ಮನುಷ್ಯನನ್ನು ಉಂಟು ಮಾಡಿದ್ದಕ್ಕಾಗಿ ಪಶ್ಚಾತ್ತಾಪಪಟ್ಟು ಹೃದಯದಲ್ಲಿ ನೊಂದುಕೊಂಡನು (ಆದಿ. 6:5–6).

8) **ಹರ್ಷ ಹೃದಯ** :– (ಜ್ಞಾನೋ. 15:16) ಹರ್ಷ ಹೃದಯವು ಒಳ್ಳೇ ಔಷಧ. ಕುಗ್ಗಿದ ಮನದಿಂದ ಒಣ ಮೈ (ಜ್ಞಾನೋ. 17:20) ಹೃದಯದಲ್ಲಿ ಆಗುವ ಸಂತೋಷ ಮುಖದಲ್ಲೂ ಕೂಡಾ ಪ್ರಕಟವಾಗಿರುವುದು "ಹರ್ಷ ಹೃದಯದಿಂದ ಹಸನ್ಮುಖ ಮನೋವ್ಯಥೆಯಿಂದ ಆತ್ಮಭಂಗ" (ಜ್ಞಾನೋ. 15:13). ಕೆಲವರ ಮನೆಯಲ್ಲಿ ಊಟಕ್ಕೆ, ಬಟ್ಟೆಗೆ ಏನೂ ಕಡಿಮೆಯಿರುವುದಿಲ್ಲ, ಆದರೆ ಅವರಲ್ಲಿ ಸಂತೋಷಭರಿತ

ನೀನು ನನ್ನ ಅಂತರಾತ್ಮವನ್ನು ಬಿಡುಗಡೆ ಮಾಡು; ಆಗ ಆಸಕ್ತಿಯಿಂದ
ನಿನ್ನ ಆಜ್ಞಾಮಾರ್ಗವನ್ನು ಅನುಸರಿಸುವೆನು (ಕೀರ್ತ. 119:32).

ಮುಖನೂ ಇಲ್ಲ, ಮಾತು ಇಲ್ಲ, ಕಾರಣ ಹೃದಯದಲ್ಲಿ ಸಂತೋಷ ಇಲ್ಲದಿರುವುದೇ ಆಗಿದೆ. 'ಹರ್ಷ ಹೃದಯನಿಗೆ ನಿತ್ಯವೂ ಔತಣ' (ಜ್ಞಾನೋ. 15:15). ದಾವೀದನು ಬರೆಯುತ್ತಾನೆ, ಧಾನ್ಯ ದ್ರಾಕ್ಷೆಗಳು ಸಮೃದ್ಧಿಯಾಗಿ ಬೆಳೆದ ಸುಗ್ಗಿಕಾಲದಲ್ಲಿ ಅವರಿಗಿರುವ ಸಂತೋಷಕ್ಕಿಂತಲೂ ನೀನು ನನ್ನ ಹೃದಯದಲ್ಲಿ ಹೆಚ್ಚಾದ ಆನಂದವನ್ನು ಉಂಟು ಮಾಡಿದ್ದೀ (ಕೀರ್ತ. 4:7).

9) **ಯಥಾರ್ಥ ಹೃದಯ** : ಯಥಾರ್ಥ ಹೃದಯವುಳ್ಳವರಿಗೆ ಸಂತೋಷವೂ ಬಿತ್ತಲ್ಪಟ್ಟಿದೆ (ಕೀರ್ತ. 97:11). ಕೆಲವೊಮ್ಮೆ ನಾವು ಸಭೆಯಲ್ಲಿ ದೊಡ್ಡದಾಗಿ ಸಾಕ್ಷಿ ಕೊಡುತ್ತೇವೆ. ನಮ್ಮ ಯಥಾರ್ಥವನ್ನು ನಾಲ್ಕಾರು ಜನರಿಗೆ ತೋರಿಸಲು ಪ್ರಯತ್ನಿಸುತ್ತೇವೆ. ಆದರೆ ಮನೆಯೊಳಗೆ ಬಂದಾಗ ಗೊತ್ತಾಗುತ್ತೆ ನಾವು ಎಷ್ಟು ಯಥಾರ್ಥರು ಎಂದು. "ಮನೆಯೊಳಗೂ ಯಥಾರ್ಥ ಹೃದಯದಿಂದಲೇ ಪ್ರವರ್ತಿಸುವೆನು. ಯಾವ ನೀಚವಾದ ಕಾರ್ಯವನ್ನು ದೃಷ್ಟಿಸುವುದಿಲ್ಲ" (ಕೀರ್ತ. 101:2–3). ಯೋಬನು ಎಷ್ಟೇ ಹೋರಾಟ, ಶೋಧನೆಗಳು ಬಂದರೂ ತನ್ನ ಯಥಾರ್ಥತೆಯನ್ನು ಬಿಡಲಿಲ್ಲ. ಆದರೆ ಹೆಂಡತಿ ಕೋಪಿಸಿಕೊಂಡು ಶಪಿಸಿದಳು. "ನಿನ್ನ ಯಥಾರ್ಥತ್ವವನ್ನು ಇನ್ನು ಬಿಡಲಿಲ್ಲವೇ? ದೇವರನ್ನು ಧೂಷಿಸಿ ಸಾಯಿ ಎಂದು ಹೇಳಿದಳು" (ಯೋಬ. 2:9). ಅದೇ ಯೋಬನು ಬರೆಯುತ್ತಾನೆ, "ನನ್ನ ಹೃದಯದ ಯಥಾರ್ಥತ್ವವನ್ನು ನನ್ನ ಮಾತುಗಳೇ ತಿಳಿಸುವವು" (ಯೋಬ. 33:3).

ಪ್ರಿಯ ದೇವ ಮಗುವೇ, ಒಳಗೊಂದು ಹೊರಗೊಂದು ಇದನ್ನು ಬಿಟ್ಟು ಒಂದೇ ಆಗಿರು, ಯಥಾರ್ಥವಾಗಿರು. ಹಿಜ್ಕೀಯನು ಮರಣಕರ ರೋಗದಲ್ಲಿ ಬಿದ್ದಾಗ ಆತನು ಸಾಯುವ ಸಮಯದಲ್ಲಿ ತನ್ನ ಯಥಾರ್ಥತ್ವವನ್ನು ದೇವರ ಮುಂದೆ ಇಟ್ಟ. "ನಾನು ನಂಬಿಗಸ್ತನಾಗಿಯೂ, ಯಥಾರ್ಥಚಿತ್ತನಾಗಿಯೂ ನಿನಗೆ ನಡೆದುಕೊಂಡು ನಿನ್ನ ದೃಷ್ಟಿಯಲ್ಲಿ ಒಳ್ಳೆಯವನಾಗಿದ್ದನ್ನು ನೆನಪು ಮಾಡಿಕೊ" (ಯೆಶಾ. 38:3). "ಯಥಾರ್ಥರಿಗೆ ಕತ್ತಲೆಯಲ್ಲಿಯೂ ಜ್ಯೋತಿ ಮೂಡುವದು" (ಕೀರ್ತ. 112:4). ದೇವ ಮಗುವೇ, ಅನೇಕ ಹೃದಯಗಳ ಕುರಿತಾಗಿ ನಾವು ಧ್ಯಾನಿಸಿದ್ದೇವೆ. ನಿನ್ನ ಹೃದಯವನ್ನು ಪರೀಕ್ಷಿಸು ಕರ್ತನಿಗೆ ಬೇಕಾದ ಹೃದಯವು ನಿನ್ನಲ್ಲಿರಲಿ. "ದೇವಾ ನನ್ನನ್ನು ಪರೀಕ್ಷಿಸಿ ನನ್ನ ಹೃದಯವನ್ನು ತಿಳಿದುಕೋ. ನನ್ನನ್ನು ಶೋಧಿಸಿ ನನ್ನ ಆಲೋಚನೆಗಳನ್ನು ಗೊತ್ತು ಮಾಡು" (ಕೀರ್ತ. 139:23).

ಕರ್ತನು ನಿಮ್ಮೊಂದಿಗಿರಲಿ.

ಮುಂದುವರಿಯುವದು.......

**ಪಾ॥ ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

# ಸ್ಥಳೀಯ ಮತ್ತು ವಿದೇಶ ಸುದ್ಧಿ

- ಪ್ರಯಾಣಿಕನೊಬ್ಬನ ಎಡವಟ್ಟಿನಿಂದ ಲಾಸ್ ಎಂಜಲೀಸ್‌ನಿಂದ ಫಿಲಿದೆಲ್ಫಿಯಾಕ್ಕೆ ತೆರಳುತ್ತಿದ್ದ ವಿಮಾನ ಫೀನಿಕ್ಸ್‌ಗೆ ಹೋದ ಘಟನೆ ನಡೆದಿದೆ. 2001ರ ಘಟನೆ ಬಗ್ಗೆ ಭಾರಿ ತಲೆಕೆಡಿಸಿಕೊಂಡಿದ್ದ ಪ್ರಯಾಣಿಕನೊಬ್ಬ ಲಾಸ್ ಏಂಜಲೀಸ್‌ನಲ್ಲಿ ವಿಮಾನ ಟೇಕ್ ಆಫ್ ಆಗುತ್ತಿದ್ದಂತೆ 9/11 ಘಟನೆ ಬಗ್ಗೆ ಎಚ್ಚರಿಕೆ ನೀಡಲು ಶುರುಮಾಡಿದ. ಇದರಿಂದ ಗಲಿಬಿಲಿಗೊಂಡ ವಿಮಾನ ಸಿಬ್ಬಂದಿ ವಿಮಾನದ ದಿಕ್ಕನ್ನೇ ಬದಲಿಸಿದರು.
- ವಿಶ್ವದಲ್ಲಿ ಭಾರತದ ಮೌಲ್ಯ ಎಷ್ಟು ಎಂದರೆ ತೀರ ಹಿಂದೆ ಇದ್ದೀತು ಎಂದು ಗ್ರಹಿಸಬೇಕಾದ್ದೇ ಇಲ್ಲ. ಈಗದರ ಮೌಲ್ಯ ಭರ್ಜರಿಯಾಗಿ ಮೇಲ್ಕೇರಿದೆ. ಬ್ರ್ಯಾಂಡ್ ಇಂಡಿಯಾ ಮೌಲ್ಯವು ಇದೀಗ ಜಗತ್ತಿನಲ್ಲೇ 7ನೇ ಸ್ಥಾನದಲ್ಲಿದ್ದು ಬ್ರ್ಯಾಂಡ್‌ವಾಲ್ಯೂ 13,650 ಕೋಟಿ ರೂ. ಆಗಿದೆ.
- ಇಂಡೋನೇಷ್ಯಾದ ಬಾಲಿಯಲ್ಲಿ ಸೆರೆ ಸಿಕ್ಕಿರುವ ಕುಖ್ಯಾತ ಭೂಗತ ಪಾತಕಿ ಛೋಟಾ ರಾಜನ್‌ಗೆ ಇದೀಗ ತನ್ನನ್ನು ಬಂಧಿಸಿಡಲಾಗಿರುವ ಜೈಲಿನಲ್ಲೇ ಜೀವಬೆದರಿಕೆಯ ಭೀತಿ ಎದುರಾಗಿದೆ. ಜೈಲಿನಲ್ಲಿರುವ ಸ್ಥಳೀಯ ಕ್ರಿಮಿನಲ್‌ಗಳು ತನ್ನ ಜೀವಕ್ಕೆ ಅಪಾಯ ತಂದೊಡ್ಡಬಹುದು. ಹೀಗಾಗಿ ತನ್ನನ್ನು ಜೈಲಿನ ಬೇರೆ ಸೆಲ್‌ಗೆ ಸ್ಥಳಾಂತರಿಸಿ ಎಂದು ಆತ ಜೈಲಿನ ಅಧಿಕಾರಿಗಳಿಗೆ ಕೋರಿಕೆ ಇಟ್ಟಿದ್ದಾನೆ ಎಂದು ಟಿ.ವಿ ವಾಹಿನಿಯೊಂದು ವರದಿ ಮಾಡಿದೆ.
- ಕಾಠ್ಮಂಡು ಭಾರತ–ನೇಪಾಳ ನಡುವಿನ ಶೇ. 70 ರಷ್ಟು ದ್ವಿಪಕ್ಷೀಯ ವಾಣಿಜ್ಯ ವ್ಯವಹಾರಗಳು ನಡೆಯುವ ರಕೌಲ್ ಸಮೀಪದ ಅತ್ಯಂತ ಪ್ರಮುಖ ಗಡಿ ಕೇಂದ್ರದಲ್ಲಿ ಮಿತೇರಿ ಸೇತುವೆಯ ಮೇಲೆ ಧರಣಿ ಕೂತಿರುವ ಪ್ರತಿಭಟನಕಾರರನ್ನು ಬಲವಂತದಿಂದ ಓಡಿಸುವ ಮೂಲಕ ನೇಪಾಳಿ ಪೊಲೀಸರು 40 ದಿನಗಳಿಂದ ಬಂದ್ ಆಗಿದ್ದ ಈ ಗಡಿ ದ್ವಾರವನ್ನು ಇಂದು ತೆರವುಗೊಳಿಸಿದರು.

ನಿನ್ನ ನೇಮಗಳ ದಾರಿಯನ್ನು ತಿಳಿಯಪಡಿಸು;
ಆಗ ನಿನ್ನ ಅದ್ಭುತಕೃತ್ಯಗಳನ್ನು ಧ್ಯಾನಿಸುವೆನು (ಕೀರ್ತ. 119:27).

# ಆರೋಗ್ಯ ಸ್ವರ

ಈಗ ಬಹಳಷ್ಟು ಜನರು ಅದರಲ್ಲೂ ವಿಶೇಷವಾಗಿ ಪೌರಾತ್ಯ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳ ಬಹಳಷ್ಟು ಜನರು ಸ್ವತ: ಸಸ್ಯಾಹಾರದತ್ತ ಪರಿವರ್ತನೆಗೊಳ್ಳುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಸಸ್ಯಾಹಾರದ ಮಹತ್ವವನ್ನು ಮನಗಂಡಿರುವ ಅವರು ಪೂರ್ಣವಾಗಿ ಅಲ್ಲದಿದ್ದರೂ, ತಮ್ಮ ದಿನನಿತ್ಯದ ಆಹಾರದಲ್ಲಿ ಭಾಗಶ: ಸಸ್ಯಾಹಾರವನ್ನೇ ಬಳಸುತ್ತಿದ್ದಾರೆ.

ಸಸ್ಯಜನ ಆಹಾರದಲ್ಲಿ ಸ್ಯಾಚುರೇಟೆಡ್ ಕೊಬ್ಬು ಕಡಿಮೆ ಪ್ರಮಾಣದಲ್ಲಿ ಇದ್ದು, ನಾರಿನ ಅಂಶ ಅಧಿಕವಿರುತ್ತದೆ, ಆಂಟಿ ಆಕ್ಸಿಡಾಂಟ್‌ಗಳು, ವಿಟಾಮಿನ್‌ಗಳು ಹೆಚ್ಚು ಇರುತ್ತವೆ.

ಸಸ್ಯಾಹಾರದಲ್ಲಿ ನಮ್ಮ ದೇಹಕ್ಕೆ ನೆರವಾಗುವಂತಹ ರಕ್ಷಣಾತ್ಮಕ ರಾಸಾಯನಿಕಗಳು ಇರುವ ಕಾರಣಕ್ಕಾಗಿ, ಇದೀಗ ಅನೇಕ ಕಾಯಿಲೆಗಳಿಗೆ ಪರಿಹಾರವಾಗಿ, ಆರೋಗ್ಯ ಜೀವನ ಮತ್ತು ದೀರ್ಘಾಯುಷ್ಯಕ್ಕಾಗಿ ಸಸ್ಯಾಹಾರವನ್ನು ಶಿಫಾರಸು ಮಾಡಲಾಗುತ್ತಿದೆ.

ಸಸ್ಯಾಹಾರ ಸೇವಿಸುವವರಲ್ಲಿ ಮಾಂಸಾಹಾರ ಸೇವಿಸುವವರಂತೆ ಬೊಜ್ಜು ಬೆಳೆಯುವ ಸಾಧ್ಯತೆ ಕಡಿಮೆ ಮತ್ತು ಮಾಂಸಾಹಾರ ಸೇವಿಸುವವರಂತೆ ಇವರು ಆಗಾಗ ಕಾಯಿಲೆಗೆ ಬೀಳುವ ಸಾಧ್ಯತೆಯೂ ಕಡಿಮೆ. ಇತರ ದೇಶಗಳಿಗೆ ಹೋಲಿಸಿದಾಗ, ಚೀನಾದಂತಹ ದೇಶಗಳಲ್ಲಿ, ಯಾರು ಸಸ್ಯಾಹಾರವನ್ನೇ ಸೇವಿಸುತ್ತಾರೆಯೋ ಅಥವಾ ಮಾಂಸಾಹಾರವನ್ನು ಸೇವಿಸುವುದಿಲ್ಲವೋ ಅವರು ಹೃದಯದ ಕಾಯಿಲೆ, ಸ್ತನದ ಕ್ಯಾನ್ಸರ್ ಮತ್ತು ಮಧುಮೇಹಗಳಿಗೆ ಕಡಿಮೆ ಈಡಾಗುವುದು ಕಂಡು ಬಂದಿದೆ.

ಸಸ್ಯಾಹಾರದಿಂದ ಬರುವ ಒಟ್ಟು ಕ್ಯಾಲೊರಿಗಳ ಪ್ರಮಾಣಕ್ಕೆ ಹೋಲಿಸಿದರೆ, ಮಾಂಸಾಹಾರದ ಕೊಬ್ಬಿನಿಂದ ಬರುವ ಒಟ್ಟು ಕ್ಯಾಲೊರಿಯ ಪ್ರಮಾಣ ಬಹಳ ಹೆಚ್ಚು. ಮಾಂಸಾಹಾರಗಳಿಂದ ದೊರಕುವ ಅಪಾಯಕಾರಿ ಸ್ಯಾಚುರೇಟೆಡ್ ಕೊಬ್ಬಿಗಿಂತಲೂ ಹೆಚ್ಚಾಗಿ ಸಸ್ಯಾಹಾರದಿಂದ ದೊರಕುವ ಹೆಚ್ಚಿನ ಕೊಬ್ಬುಗಳು ಪಾಲಿಸ್ಯಾಚುರೇಟೆಡ್ ಮತ್ತು ಮೋನೋಸ್ಯಾಚುರೇಟೆಡ್ ರೂಪದವುಗಳಾಗಿರುತ್ತವೆ.

ಹೆಚ್ಚಿನ ಸಸ್ಯಾಹಾರಗಳು ಆಂಟಿಆಕ್ಸಿಡಾಂಟ್ ಮತ್ತು ವಿಟಾಮಿನ್ ಸಿ. ವಿಟಾಮಿನ್ ಇ ಮತ್ತು ಬೀಟಾ ಕೆರೋಟಿನ್‌ಗಳಿಂದ ಭರಿತವಾಗಿದ್ದು, ನಮ್ಮ ದೇಹವನ್ನು ಕಾಯಿಲೆಗಳಿಂದ ರಕ್ಷಿಸಲು ಈ ಅಂಶಗಳು ಬಹಳ ಅವಶ್ಯಕ. ಸಸ್ಯಜನ್ಯ ಆಹಾರಗಳಲ್ಲಿ ಇರುವ ಫೈಟೋ ನ್ಯೂಟ್ರಿಯೆಂಟ್‌ಗಳು ಕ್ಯಾಟರಾಕ್ಟ್ ಮತ್ತು ಹೃದಯದ ಕಾಯಿಲೆಗಳ ಅಪಾಯವನ್ನು ತಗ್ಗಿಸಲು ಸಹಾಯ ಮಾಡುತ್ತದೆ. ಬಸಳೆ ಮತ್ತು ವಿವಿಧ ರೀತಿಯ ಹಸುರು ಮತ್ತು ಕಿತ್ತಲೆ ಬಣ್ಣದ ತರಕಾರಿಗಳು ನಮ್ಮ ದೇಹದಲ್ಲಿ ರೋಗಗಳಿಂದ ಉಂಟಾಗುವ ಅಪಾಯವನ್ನು ತಡೆಯಲು ಸಹಾಯ ಮಾಡುತ್ತವೆ.

ಇಷ್ಟೇ ಅಲ್ಲದೆ ಸಸ್ಯಜನ್ಯ ಆಹಾರಗಳು ನಾರಿನ ಅಂಶಗಳಿಂದ ಸಮೃದ್ಧವಾಗಿರುತ್ತವೆ. ಆಹಾರದಲ್ಲಿರುವ ನಾರಿನ ಅಂಶವು ಹೊಟ್ಟೆ ತುಂಬಿರುವ ಭಾವವನ್ನು ಮೂಡಿಸುವುದಷ್ಟೇ ಅಲ್ಲದೆ ಆಹಾರವನ್ನು ಇನ್ನಷ್ಟು ಸತ್ವಪೂರ್ಣಗೊಳಿಸುತ್ತದೆ ಮತ್ತು ಮಲವಿಸರ್ಜನೆಯನ್ನು ಸರಾಗಗೊಳಿಸುತ್ತದೆ ಮತ್ತು ರಕ್ತದಲ್ಲಿನ ಕೊಲೆಸ್ಟ್ರಾಲ್ ಅಂಶವನ್ನು ತಗ್ಗಿಸಲು ನಾರಿನ ಅಂಶವು ಸಹಾಯ ಮಾಡುತ್ತದೆ.

ಸಸ್ಯಾಹಾರವು ಪ್ರೊಟೀನ್ ಸೇರಿದಂತೆ ನಮ್ಮ ಶರಿರಕ್ಕೆ ಅವಶ್ಯಕ ಇರುವ ಎಲ್ಲಾ ಅಂಶಗಳನ್ನು ಪೂರೈಸುತ್ತದೆ. ಮಾಂಸಾಹಾರದಲ್ಲಿ ಇರುವ ಪ್ರೋಟೀನ್ ಪೂರ್ಣಪ್ರಮಾಣದ್ದಾಗಿರುತ್ತದೆ ಯಾಕೆಂದರೆ ಅದರಲ್ಲಿ ನಮಗೆ ಅವಶ್ಯಕ ಇರುವ ಎಲ್ಲಾ ಅಮಿನೋ ಆಸಿಡ್‌ಗಳು ಇರುತ್ತವೆ. ಆದರೆ ಸಸ್ಯಜನ್ಯ ಕೋಡುಗಳು ಮತ್ತು ಕಾಳುಗಳಲ್ಲಿ ಇರುವ ಪ್ರೋಟೀನ್‌ಗಳಲ್ಲಿ ಒಂದೆರಡು ಅಮಿನೋ ಆಸಿಡ್‌ಗಳು ಕಡಿಮೆ ಇರಬಹುದು, ಆದರೆ ಈ ಆಹಾರವನ್ನು ಹಲವು ಬಾರಿ ಸೇವಿಸುವ ಮೂಲಕ ದಿನದ ಅವಶ್ಯಕತೆಯನ್ನು ಪೂರೈಸಿಕೊಳ್ಳಬಹುದು.

ಮಾಂಸಾಹಾರದಲ್ಲಿ ವಿಟಾಮಿನ್ ಬಿ12 ಅಧಿಕ ಪ್ರಮಾಣದಲ್ಲಿ ಇರುತ್ತದೆ. ಆದರೆ ಇದೀಗ ಈ ಅಂಶವನ್ನು ಸಸ್ಯಾಹಾರಿಗಳು ಸತ್ವಪೂರ್ಣಗೊಳಿಸಿದ ದವಸಧಾನ್ಯಗಳಿಂದ, ಬಿ12 ಸಮೃದ್ಧವಾಗಿರುವ ಆಹಾರಗಳಿಂದ ಪಡೆಯಬಹುದು. ಇವು ನಮ್ಮ ನಿತ್ಯದ ಅವಶ್ಯಕತೆಯನ್ನು ಪೂರೈಸಲು ಸಹಾಯ ಮಾಡುತ್ತವೆ ಮತ್ತು ಅನೇಕ ಜನರಲ್ಲಿ ಕೆಂಪುರಕ್ತ ಕಣಗಳ ಉತ್ಪಾದನೆಯ ಕೊರತೆಯಿಂದ ಉಂಟಾಗುವ ಪರ್ನೀಶಿಯಸ್ ಅನಿಮಿಯಾ ಉಂಟಾಗುವುದನ್ನು ತಡೆಯುತ್ತದೆ.

ಸಂಗ್ರಹ.

ನಾನು ನಿನ್ನ ನೇಮಗಳನ್ನು ಎಂದಿಗೂ ಮರೆಯುವುದಿಲ್ಲ;
ಅವುಗಳಿಂದಲೇ ನನ್ನನ್ನು ಬದುಕಿಸಿದ್ದೀ (ಕೀರ್ತ. 119:93).

**ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ**
**ನೀವು ಪಾಲುದಾರರಾಗಲು ಬಯಸುವಿರಾ**

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/- | ಆರು ತಿಂಗಳಿಗೊಮ್ಮೆ | ರೂ. 6000/- |
| ಮೂರು ತಿಂಗಳಿಗೊಮ್ಮೆ | ರೂ. 2000/- | ವರ್ಷಕ್ಕೊಮ್ಮೆ | ರೂ. 8000/- |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.
**ಮೊಬೈಲ್ : 0091 9902334941**

# ನಿಮ್ಮೆಗೆಲ್ಲಾ ಸಂತಸ ಸುದ್ದಿ

# VOICE OF GOD
## (ದೇವರ ಸ್ವರ)

ಈಗಾಗಲೇ VOICE OF GOD ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಿರುತ್ತದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.

**ಆಶ್ರಮದ ಅವಶ್ಯಕತೆಗಳು**

1. ವಾಷಿಂಗ್ ಮಿಷನ್ (500ಕೆ.ಜಿ.).
2. ಕುಡಿಯವ ನೀರಿನ ಫಿಲ್ಟರ್.

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :
**0091 9902334941, 0091 8202002781, 0091 9964070654**

ಆತನ ನಾಮವೊಂದೇ ಮಹತ್ವವುಳ್ಳದ್ದು; ಆತನ ಪ್ರಭಾವವು ಭೂಮ್ಯಾಕಾಶಗಳಲ್ಲಿ ಮೆರೆಯುತ್ತದೆ (ಕೀರ್ತ. 148:14).

# ಕ್ರಿಸ್‌ಮಸ್ ವಿಶೇಷವಾದ ಸಂದೇಶ

ಮತ್ತಾ. 2:1–12 ಕರ್ತನ ಜನನ

1) ಮತ್ತಾ. 2:1 ಕರ್ತನ ಜನನದ ಸ್ಥಳ ಯೂದಾಯ ಸೀಮೆಯ ಬೇತ್ಲೆಹೇಮ್ ಯೂದಾಯ ಅಂದರೆ ಸ್ತುತಿ, ಬೇತ್ಲೆಹೇಮ್ ಅಂದರೆ ರೊಟ್ಟಿಯ ಮನೆ ಯಾವ ಮನೆಯಲ್ಲಿ ಸ್ತುತಿ ಆರಾಧನೆ ಇದೆಯೋ, ಯಾವ ಮನೆಯಲ್ಲಿ ರೊಟ್ಟಿ ಎಂಬ ದೇವರ ವಾಕ್ಯಕ್ಕೆ ಪ್ರಾಮುಖ್ಯತೆ ಕೊಡುತ್ತಾರೋ ಅಲ್ಲಿ ಕರ್ತನು ಬರಲು ಇಷ್ಟಪಡುತ್ತಾನೆ.

2) ಮತ್ತಾ. 2:2 ಅಲ್ಲಿ ಕೆಲವು ಜೋಯಿಸರು ಹುಟ್ಟಿದ ರಕ್ಷಕನನ್ನು ನೋಡಲು ಬಯಸಿದರು. ಅನೇಕರಿಗೆ ಯೇಸುವನ್ನು ನೋಡಲು ಬಯಕೆ ಇದೆ ಆದರೆ ಹೇಗೆ ನೋಡುವುದು ಗೊತ್ತಿಲ್ಲ, ಮಾರ್ಗದರ್ಶನ ಮಾಡುವವರಿಲ್ಲ. ಆದರೆ ಒಂದು ನಕ್ಷತ್ರವು ಆ ಜೋಯಿಸರನ್ನು ಕರ್ತನಾದ ಯೇಸು ಹುಟ್ಟಿದ ಸ್ಥಳಕ್ಕೆ ನಡೆಸುವುದನ್ನು ಕಾಣಬಹುದು. ಡಿಸೆಂಬರ್ ತಿಂಗಳು ಬರುವಾಗ ಅನೇಕರ ಮನೆಯಂಗಳದಲ್ಲಿ ಗೋದಲಿ ಮತ್ತು ಮನೆ ಮೇಲೆ ನಕ್ಷತ್ರ ಕಾಣಬಹುದು. ಆದರೆ ಆ ಮನೆಯೊಳಗೆ ರಕ್ಷಣೆ, ಆನಂದ ಇಲ್ಲ, ಮದ್ಯಪಾನ ಮಾಡಿದವರ ಬಾಯಿಂದ ಬರುವ ಬೈಗಳು ಮತ್ತು ಜಗಳ ಕೇಳಲಿಕ್ಕೆ ಸಿಗುತ್ತದೆ. ಯೇಸು ನಿಜವಾಗಿ ಹುಟ್ಟಿದ್ದು ಗೋದಲಿಯಲ್ಲಿ ಅಲ್ಲವೇ ಅಲ್ಲ.

ಲೂಕ. 2:7 ಆಕೆಯು ತನ್ನ ಚೊಚ್ಚಲು ಮಗನನ್ನು ಹೆತ್ತು ಬಟ್ಟೆಯಲ್ಲಿ ಸುತ್ತಿ ಚತ್ರದಲ್ಲಿ ಅವರಿಗೆ ಸ್ಥಳವಿಲ್ಲದ ಕಾರಣ ಅವನನ್ನು ಗೋದಲಿಯಲ್ಲಿ ಮಲಗಿಸಿದಳು. ಎಲ್ಲಿ ಹೆತ್ತಳು ಎಂದು ಗೊತ್ತಿಲ್ಲ, ಹೆತ್ತ ನಂತರ ಅವರು ಚತ್ರಕ್ಕೆ ಹೋದರು ಅಲ್ಲಿ ಸ್ಥಳ ಸಿಕ್ಕದ ಕಾರಣ ಮಗು ಯೇಸುವನ್ನು ಗೋದಲಿಯಲ್ಲಿ ಮಲಗಿಸಿದಳು. ನಕ್ಷತ್ರದ ಕುರಿತಾಗಿ ನಾವು ಧ್ಯಾನಿಸೋಣ.

ದೇವರ ವಾಕ್ಯದ ಮೂಲಕ ರಕ್ಷಣೆ ಹೊಂದಿದ ದೇವರ ಮಕ್ಕಳಿಗೆ ನಕ್ಷತ್ರಕ್ಕೆ ಹೋಲಿಸಲಾಗಿದೆ. "ಇವರೊಳಗೆ ನೀವು ಸರ್ವರಿಗೂ ಜೀವದಾಯಕ ವಾಕ್ಯವನ್ನು ತೋರಿಸಿ ಕೊಡುವವರಾಗಿದ್ದು ಲೋಕದೊಳಗೆ ಹೊಳೆಯುವ ಜ್ಯೋತಿರ್ಮಂಡಲಗಳಂತೆ ಕಾಣಿಸುವವರಾಗಿದ್ದೀರಲ್ಲಾ. ನೀವು ಹೀಗೆ ನಡೆದರೆ ನಾನು ಕೆಲಸ ಸಾಧಿಸಿದ್ದೂ ವ್ಯರ್ಥವಲ್ಲ, ನಾನು ಪ್ರಯಾಸಪಟ್ಟದ್ದೂ ವ್ಯರ್ಥವಲ್ಲ ಎಂಬ ಉತ್ಸಾಹವು ಕ್ರಿಸ್ತನ ದಿನದಲ್ಲಿ ನನಗೆ ಉಂಟಾಗುವುದು" (ಫಿಲಿ. 2:16).

"ಜ್ಞಾನಿಗಳು ತೇಜೋಮಯವಾದ ಆಕಾಶಮಂಡಲದಂತೆ ಪ್ರಕಾಶಿಸುವರು; ಬಹು ಜನರನ್ನು ಸದ್ಧರ್ಮಿಗಳನ್ನಾಗಿ ಮಾಡುವವರು ಯುಗಯುಗಾಂತರಗಳಲ್ಲಿಯೂ ನಕ್ಷತ್ರಗಳ ಹಾಗೆ ಹೊಳೆಯುವರು" (ದಾನಿ. 12:3). ದೇವರ ವಾಕ್ಯದಲ್ಲಿ ಒಬ್ಬ ಕ್ರೈಸ್ತ ವಿಶ್ವಾಸಿಯನ್ನು ನಕ್ಷತ್ರಕ್ಕೆ ಹೋಲಿಸಲಾಗಿದೆ. ಜೀವವುಳ್ಳ ದೇವರೂ ರಕ್ಷಕನೂ ಆಗಿರುವ ಕರ್ತನಾದ ಯೇಸುಕ್ರಿಸ್ತನ ಬಳಿಗೆ ಜನರನ್ನು ನಡೆಸುವಂತಹ ನಕ್ಷತ್ರ ಒಬ್ಬ ರಕ್ಷಣೆ ಹೊಂದಿದ ಕ್ರೈಸ್ತ ವಿಶ್ವಾಸಿಯಾಗಿದ್ದಾನೆ.

3) ಮತ್ತಾ. 2:2 ಮೂಡಣ ದೇಶದ ಜೋಯಿಸರ ಉದ್ದೇಶ ಕ್ರಿಸ್ತನನ್ನು ಕಾಣುವುದು ಮಾತ್ರವಲ್ಲ, ಆತನಿಗೆ ಅಡ್ಡಬಿದ್ದು ಆರಾಧಿಸುವುದಾಗಿತ್ತು. ಕರ್ತನಾದ ಯೇಸುಕ್ರಿಸ್ತನು ಆರಾಧನೆಗೆ ಯೋಗ್ಯನಾಗಿದ್ದಾನೆ. ಇಡೀ ಲೋಕದಲ್ಲಿ ಕ್ರಿಸ್‌ಮಸ್ ಆಚರಿಸುವ ಪ್ರತಿಯೊಬ್ಬರು ಕರ್ತನಾದ ಯೇಸುಕ್ರಿಸ್ತನನ್ನು ನಿಜವಾಗಿ ಪ್ರೀತಿಸುವವರಾಗಿ ಆತನನ್ನು ಅಡ್ಡಬಿದ್ದು ಆರಾಧಿಸಬೇಕು. ಮದ್ಯಪಾನ ಮಾಡಿ ಮತ್ತರಾಗಿ ಕುಣಿಯುವುದು ಅಲ್ಲ, ಅದು ದೇವರಿಗೆ ಅಸಹ್ಯವಾದದ್ದು. ದೇವರು ಆರಾಧನೆಯನ್ನು ನಮ್ಮಿಂದ ಬಯಸುತ್ತಾನೆ.

4) ಮತ್ತಾ. 2:3 ಇದನ್ನು ಕೇಳಿ ಅರಸನಾದ ಹೆರೋದನು ಅವನ ಕಡೆಯವರು ಯೆರೂಸಲೇಮಿನವರೆಲ್ಲರೂ ಕಳವಳ ಪಟ್ಟರು. ಕ್ರಿಸ್ತನ ಜನನವು ಪಾಪಕ್ಕೆ ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಂಡು ಆತ್ಮ ರಕ್ಷಣೆ ಹೊಂದುವ ಜನರಿಗೆ ಸಂತೋಷದ ಸಂಗತಿಯಾಗಿದೆ. ಪಾಪದಲ್ಲೇ ಜೀವಿಸುವ ಪಾಪವನ್ನು ಬಿಡಲು ಮನಸ್ಸಿಲ್ಲದವರಿಗೆ ದು:ಖದ ಸಂಗತಿಯಾಗಿದೆ. "ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರ ಕೃತ್ಯಗಳು ಕೆಟ್ಟವುಗಳಾಗಿ ರುವದರಿಂದ ಅವರು ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಪ್ರೀತಿಸಿದರು. ಕೆಟ್ಟದ್ದನ್ನು ಮಾಡುವವರು ಬೆಳಕನ್ನು ಸಹಿಸುವದಿಲ್ಲ, ತಮ್ಮ ಕೃತ್ಯಗಳು ದುಷ್ಕೃತ್ಯಗಳಾಗಿ ತೋರಿಬಂದಾವೆಂದು ಬೆಳಕಿಗೆ ಬರುವದಿಲ್ಲ; ಆದರೆ ಸತ್ಯವನ್ನು ಅನುಸರಿಸಿ ನಡೆಯುವವನು ತಾನು ದೇವರಿಂದ ನಡಿಸಿಕೊಂಡು ತನ್ನ ಕೃತ್ಯಗಳನ್ನು ಮಾಡಿದ್ದೇನೆಂದು ತೋರಿಬರುವಂತೆ ಬೆಳಕಿಗೆ ಬರುತ್ತಾನೆ" (ಯೋಹಾ. 3:19–21).

5) ಮತ್ತಾ. 2:4–6 ಹೆರೋದನು ಯೆಹೂದ್ಯರ ಶಾಸ್ತ್ರಿಗಳನ್ನು ಮಹಾಯಾಜಕರನ್ನು ಕರೆಸಿ ಕ್ರಿಸ್ತನು ಹುಟ್ಟಿದ ಕುರಿತು ವಿಚಾರಿಸುವುದನ್ನು ಕಾಣಬಹುದು. ಈ ವಿಚಾರಣೆ ರಕ್ಷಣೆ ಹೊಂದುವ ಸಲುವಾಗಿ ಅಲ್ಲ, ಅನೇಕರು ಕ್ರಿಸ್ತನ ಕುರಿತು ತಿಳಿದುಕೊಳ್ಳಲು ಇಷ್ಟಪಡುತ್ತಾರೆ, ಕೇಳಿ ಸಂತೋಷಿಸುತ್ತಾರೆ ಸಾಯುವವರೆಗೂ ರಕ್ಷಣೆ ಹೊಂದುವುದಿಲ್ಲ.

6) ಮತ್ತಾ. 2:7–8 ಹೆರೋದನು ರಹಸ್ಯವಾಗಿ ಜೋಯಿಸರನ್ನು ಕರೆಸಿ ಕೂಸು ಸಿಕ್ಕಿದ ಕೂಡಲೆ ತನಗೆ ತಿಳಿಸಲು ಹೇಳುತ್ತಿದ್ದಾನೆ. ಅದಕ್ಕೆ ಕಾರಣ ಕೂಡ ಹೇಳುತ್ತಿದ್ದಾನೆ. ತಾನು ಕೂಡ ಅದಕ್ಕೆ

ನಿನ್ನ ಧರ್ಮಶಾಸ್ತ್ರವನ್ನು ಪ್ರೀತಿಸುವವರಿಗೆ ಸಂಪೂರ್ಣ ಸಮಾಧಾನವಿರುತ್ತದೆ;
ಅಂಥವರಿಗೆ ವಿಘ್ನಕರವಾದದ್ದೇನೂ ಇರುವದಿಲ್ಲ (ಕೀರ್ತ. 119:165).

ಅಡ್ಡಬೀಳಬೇಕೆಂದು ಹೇಳುತ್ತಿದ್ದಾನೆ. ಅನೇಕ ಜನರು ಕೂಡ ಈ ದಿನಗಳಲ್ಲಿ ಕ್ರಿಸ್ತನನ್ನು ನಂಬುವುದಾಗಿಯೂ ಆರಾಧಿಸುವುದಾಗಿಯೂ ಹೇಳುತ್ತಾರೆ ಆದರೆ ಅವರ ಜೀವಿತದಲ್ಲಿ ಹೆರೋದನ ಹಾಗೆ ಪಶ್ಚಾತ್ತಾಪವೂ ಬದಲಾವಣೆಯೂ ಇರುವುದಿಲ್ಲ. ಮತ್ತಾ. 14:1–12 ಹೆರೋದನು ತನ್ನ ಅಣ್ಣನ ಹೆಂಡತಿಯನ್ನು ಇಟ್ಟುಕೊಂಡದ್ದರಿಂದ ಸ್ನಾನಿಕ ಯೋಹಾನನು ಅವನನ್ನು ಖಂಡಿಸಿದನು ಇದರಿಂದ ಹೆರೋದನು ಸ್ನಾನಿಕ ಯೋಹಾನನ್ನು ಕೊಲ್ಲಿಸಲು ಸಮಯ ನೋಡುತ್ತಿದ್ದನು. ಮತ್ತಾ. 4:5 ಇಂದು ಅನೇಕರು ಯೇಸುವಿನ ಜನನ, ಮರಣ, ಹೂಣಲ್ಪಡುವಿಕೆಯ ಕುರಿತು ತಿಳಿದುಕೊಳ್ಳಲು ಅಪೇಕ್ಷಿಸುತ್ತಾರೆ. ತಾವು ನಂಬುವುದಾಗಿ ಕೂಡ ಹೇಳುತ್ತಾರೆ. ಯಾವುದೇ ಸೇವಕರು ಅವರು ತಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಡಬೇಕಾದ ಅವಶ್ಯಕತೆ ಇದೆ ಎಂದು ತಿಳಿಸಿದಾಗ ಕೋಪಗೊಳ್ಳುತ್ತಾರೆ ಮತ್ತು ಸೇವಕರಿಗೆ ಕೇಡು ಮಾಡಲು ಸಮಯಕ್ಕೆ ಕಾದಿರುತ್ತಾರೆ. ಅಂಥ ಜನರ ಗುಂಪು ಕೂಡ ಇರುತ್ತದೆ. "ಧರ್ಮನಿಂದಕನನ್ನು ಶಿಕ್ಷಿಸುವವನು ತನ್ನನ್ನು ಅವಮಾನಕ್ಕೆ ಗುರಿಮಾಡಿಕೊಳ್ಳುವನು, ಕೆಟ್ಟವನನ್ನು ಗದರಿಸುವವನಿಗೆ ಕಳಂಕವಾಗುವದು. ಧರ್ಮನಿಂದಕನನ್ನು ಗದರಿಸಬೇಡ, ನಿನ್ನನ್ನು ಹಗೆ ಮಾಡುವನು; ಜ್ಞಾನವಂತನನ್ನು ಗದರಿಸಿದರೆ ನಿನ್ನನ್ನು ಪ್ರೀತಿಸುವನು". (ಜ್ಞಾನೋ. 9:7–8).

7) ಮತ್ತಾ. 2:9 ಅವರು ಅರಸನ ಮಾತನ್ನು ಕೇಳಿ ಹೊರಟಾಗ ಮೂಡಣ ದೇಶದಲ್ಲಿ ಕಂಡ ನಕ್ಷತ್ರವು ಅವರ ಮುಂದೆ ಮುಂದೆ ನಡೆದು ಕೂಸು ಇದ್ದ ಸ್ಥಳದ ಮೇಲೆ ಬಂದು ನಿಂತಿತು. ಈ ನಕ್ಷತ್ರವು ಸರಿಯಾಗಿ ಕ್ರಿಸ್ತನಿರುವ ಸ್ಥಳಕ್ಕೆ ಈ ಜೋಯಿಸರನ್ನು ನಡೆಸಿತು. ಇಂದು ಅನೇಕರು ದೇವರ ವಾಕ್ಯದ ಅರ್ಥ ತಿಳಿಯದೆ ತಮ್ಮ ಮನೆಗಳ ಮೇಲೆ ನಕ್ಷತ್ರಗಳನ್ನು ಸಿಕ್ಕಿಸುತ್ತಾರೆ. ಕರ್ತನಾದ ಯೇಸುಕ್ರಿಸ್ತನ ಬಳಿಗೆ ನಡೆಸುವ ನಕ್ಷತ್ರ ನಾನು ಮತ್ತು ನೀವಾಗಿದ್ದೇವೆ.

ಯಾವಾಗ ನಾವು ಜನರನ್ನು ಕ್ರಿಸ್ತನ ಬಳಿಗೆ ನಡೆಸುವ ನಕ್ಷತ್ರವಾಗುತ್ತೇವೆ :–

1) ನಾನು ಕರ್ತನಾದ ಯೇಸುಕ್ರಿಸ್ತನು ಈ ಲೋಕದಲ್ಲಿ ಹುಟ್ಟಿದ ಉದ್ದೇಶ ತಿಳಿದು ನಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟು ಕ್ರಿಸ್ತನನ್ನು ನಂಬಿ ಆತ್ಮ ರಕ್ಷಣೆ ಹೊಂದಿಕೊಳ್ಳಬೇಕು.

2) ಒಂದು ಸಾಕ್ಷಿಯ ಜೀವಿತ ಮತ್ತು ಬೆಳಕಿನ ಜೀವಿತ ಈ ಲೋಕದಲ್ಲಿ ನಾನು ಜೀವಿಸಬೇಕು. ನೀವು ಹಿಂದಿನ ಕಾಲದಲ್ಲಿ (ಕ್ರಿಸ್ತನನ್ನು ಅಂಗೀಕರಿಸುವುದಕ್ಕೆ ಮುಂಚೆ) ಕತ್ತಲೆಯಾಗಿದ್ದೀರಿ ಆದರೆ ಈಗ ನೀವು ಕ್ರಿಸ್ತನಲ್ಲಿದ್ದು, ಬೆಳಕಾಗಿದ್ದೀರಿ. ದೇವರ ವಾಕ್ಯ ನಮ್ಮ ಶರೀರವು ಪರಿಶುದ್ಧಾತ್ಮನ ಆಲಯವೆಂಬುದಾಗಿ ತಿಳಿಸುತ್ತದೆ. (ಎಫೆ. 5:8). ಆದಕಾರಣ ಯಾವುದೇ ಮಲೀನಪಡಿಸುವ ಮಧ್ಯಪಾನ, ಸಿಗರೇಟು, ತಂಬಾಕು ಇವುಗಳನ್ನು ತ್ಯಜಿಸಿ ಸಾಕ್ಷಿಯ ಜೀವನ ಈ ಲೋಕದಲ್ಲಿ ನಡೆಸಬೇಕು. (1 ಕೊರಿ. 3:16).

3) ಸುವಾರ್ತೆ ಜನರಿಗೆ ಹೇಳಬೇಕು. "ಧರ್ಮಾತ್ಮನ ಫಲ ಜೀವವೃಕ್ಷ; ಜ್ಞಾನಿಯು ಆತ್ಮಗಳನ್ನು ಆಕರ್ಷಿಸುವನು" (ಜ್ಞಾನೋ. 11:30).

4) ಕರ್ತನು ನಮ್ಮ ಜೀವಿತದಲ್ಲಿ ಮಾಡಿದ ಉಪಕಾರಗಳನ್ನು ಜನರಿಗೆ ತಿಳಿಸಬೇಕು (ಮತ್ತಾ. 5:20, ಯೋಹಾ. 4:39).

5) ಈ ಲೋಕದಲ್ಲಿ ಒಳ್ಳೇಯ ಕ್ರಿಯೆಗಳನ್ನು ನಡೆಸಬೇಕು (ಮತ್ತಾ. 5:16).

8) ಮತ್ತಾ. 2:10 ಅವರು ನಕ್ಷತ್ರವನ್ನು ನೋಡಿ ಅತ್ಯಂತ ಸಂತೋಷಪಟ್ಟರು. ಮೇಲಿನ 5 ಸಂಗತಿಗಳು ನಿನ್ನಲ್ಲಿದ್ದರೆ ನೀನು ಈ ಲೋಕದಲ್ಲಿ ಹೊಳೆಯುವ ಕ್ರಿಸ್ತನ ಬಳಿಗೆ ನಡೆಸುವ ನಕ್ಷತ್ರವಾಗಿದ್ದೀ. ನಿನ್ನ ಮನೆಯವರೂ, ಕುಟುಂಬದವರೂ, ಸ್ನೇಹಿತರು ನಿನ್ನನ್ನು ಕಂಡಾಗಲೆಲ್ಲಾ ಸಂತೋಷ ಪಡುತ್ತಾರೆ. ಈ ವಾಕ್ಯ ಓದುವಾಗಲೇ ನಿನ್ನನ್ನೇ ನೀನು ಪರೀಕ್ಷಿಸು. ಇಲ್ಲಿಯವರೆಗೆ ಜನರು ನಿನ್ನನ್ನು, ನಿನ್ನ ತಪ್ಪಾದ ಜೀವಿತದ ನಿಮಿತ್ತ ಸಂತೋಷಪಡದೆ ಇದ್ದರೆ ಇವತ್ತಿನಿಂದ ನಿನ್ನನ್ನು ಸಂಪೂರ್ಣವಾಗಿ ಬದಲಾಗಲು ಒಪ್ಪಿಸಿಕೊಡು. ಕರ್ತನು ನಿನ್ನನ್ನು ಲೋಕದಲ್ಲಿ ಹೊಳೆಯುವ ನಕ್ಷತ್ರವನ್ನಾಗಿ ಮಾರ್ಪಡಿಸುವಾಗ ಜನರು ನಿನ್ನನ್ನು ಕಂಡು ಸಂತೋಷಪಡುವರು.

9) ಮತ್ತಾ. 2:11 ಕೂಸಿಗೆ ಜೋಯಿಸರು ಸಾಷ್ಟಾಂಗ ನಮಸ್ಕಾರ ಮಾಡಿದರು. ಈ ಕ್ರಿಸ್‌ಮಸ್‌ಗೆ 3 ಉದ್ದೇಶವಿದೆ. 1) ಕ್ರಿಸ್ತನು ಈ ಲೋಕದಲ್ಲಿ ಹುಟ್ಟಿದ ಉದ್ದೇಶವೇನು ಎಂದು ತಿಳಿದುಕೊಳ್ಳಬೇಕು. 2) ಜನರನ್ನು ಕ್ರಿಸ್ತನ ಕಡೆಗೆ ನಡೆಸುವ ನಿಜವಾದ ನಕ್ಷತ್ರ ನೀನಾಗಬೇಕು.

3) ನಿನ್ನ ಜೀವಮಾನದಲ್ಲಿ ಕ್ರಿಸ್ತನನ್ನು ಆರಾಧಿಸುತ್ತಾ ಆತನ ಸೇವೆ ನೀನು ಮಾಡಬೇಕು.

10.ಮತ್ತಾ. 2:11 ಜೋಯಿಸರು 3 ವಿಧವಾದ ಕಾಣಿಕೆಯನ್ನು ಕ್ರಿಸ್ತನಿಗೆ ಕೊಟ್ಟರು.

1) ಚಿನ್ನ 2) ಧೂಪ 3) ರಕ್ತಬೋಳ

1) ಚಿನ್ನ ಆತನು ರಾಜಾಧಿರಾಜನು 2) ಧೂಪ ಆತನು ಮಹಾಯಾಜಕನು 3) ರಕ್ತಬೋಳ ಆತನು ಜೀವಿತನಾಗಿ ಶಿಲುಬೆಯಲ್ಲಿ ಸತ್ತನು (ಕಹಿ) ಎಂಬುದಾಗಿ ಸೂಚಿಸುತ್ತದೆ.

11)ಮತ್ತಾ. 2:12 ಕರ್ತನು ಕನಸಿನಲ್ಲಿ ಕಾಣಿಸಿಕೊಂಡು ಹೆರೋದನ ಬಳಿಗೆ ತಿರುಗಿ ಹೋಗದಿರಲು ಅಪ್ಪಣೆಕೊಟ್ಟನು. ಕ್ರಿಸ್ತನನ್ನು ನೀನು ಸಂಧಿಸಿದ ಬಳಿಕ ನಿನ್ನ ಸ್ನೇಹಿತರು, ಜೊತೆಗಾರರು

ನಾನು ಯೆಹೋವನನ್ನು ಎದುರುನೋಡುತ್ತೇನೆ;
ನನ್ನ ಪ್ರಾಣವು ಆತನನ್ನು ಕಾದುಕೊಂಡಿದೆ (ಕೀರ್ತ. 130:5).

ಬದಲಾಗುತ್ತಾರೆ. ಹಳೆಯ ಕುಡುಕರಲ್ಲ ನಿನ್ನ ಸ್ನೇಹಿತರು, ಹಳೆಯ ಅಪರಾಧಿಗಳಲ್ಲ ನಿನ್ನ ಸ್ನೇಹಿತರು.

12)ಮತ್ತಾ. 2:12 ಅವರು ಮತ್ತೊಂದು ದಾರಿಯಿಂದ ತಮ್ಮ ದೇಶಕ್ಕೆ ಹೊರಟು ಹೋದನು. ಕರ್ತನಾದ ಯೇಸುಕ್ರಿಸ್ತನು ನಿನ್ನ ಜೀವಿತದಲ್ಲಿ ಬಂದಾಗ ನಿನ್ನ ದಾರಿ ಬದಲಾಗುತ್ತದೆ, ನಿನ್ನ ಮಾರ್ಗ ಬದಲಾಗುತ್ತದೆ ಮತ್ತೆ ಯಾವತ್ತು ಈವರೆಗೆ ಬಂದಂತಹ ದಾರಿಯಲ್ಲಿ ನೀನು ಮುಂದುವರಿಯುವುದಿಲ್ಲ.

ನೀನು ನಿಜವಾಗಿ ಕ್ರಿಸ್‌ಮಸ್ ಆಚರಿಸಬೇಕೆಂದಿದ್ದರೆ, ನಿನ್ನ ಕ್ರಿಸ್‌ಮಸ್‌ಗೆ ನಿಜವಾದ ಅರ್ಥ ಬರಬೇಕಾದರೆ ಇಂದಿನಿಂದ ನಿನ್ನ ದಾರಿ ಬದಲಾಗಲಿ. "ಯಾವನು ಯೆಹೋವನಲ್ಲಿ ಭಯಭಕ್ತಿಯುಳ್ಳವನೋ ಅವನಿಗೆ ಉಚಿತವಾದ ಮಾರ್ಗವನ್ನು ಆತನು ಬೋಧಿಸುವನು" (ಕೀರ್ತ. 25:12).

**ಪಾ॥ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು.

# ನೀತಿವಂತನ ಆಶೀರ್ವಾದಗಳು

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

ದಾವೀದನು ಮೊದಲು ಮಾಡಿದ ಪಾಪ ಯುದ್ಧಕ್ಕೆ ಹೋಗಬೇಕಾದ ಸಮಯದಲ್ಲಿ ಯುದ್ಧಕ್ಕೆ ಹೋಗಲಿಲ್ಲ, ಮಾತ್ರವಲ್ಲದೆ ಸಂಜೆ ಸಮಯದಲ್ಲಿ ಯುದ್ಧಕ್ಕೆ ಹೋದಂತಹ ತನ್ನ ಸೈನಿಕರಿಗಾಗಿ ಪ್ರಾರ್ಥಿಸುವುದನ್ನು ಬಿಟ್ಟು ಮಾಳಿಗೆಯ ಮೇಲೆ ಸುಮ್ಮನೆ ಸಮಯವನ್ನು ವ್ಯರ್ಥ ಮಾಡಿದನು. ಈ ಸಮಯವನ್ನು ಸೈತಾನನು ಬಳಸಿಕೊಂಡನು. ಸ್ನಾನಮಾಡುವಂತಹ ಬೆತ್ಷಬೆಯನ್ನು ನೋಡಿದ ದಾವೀದನು ಅವಳನ್ನು ಬಯಸುವಂತೆ ಸೈತಾನ ಮಾಡಿದ ಮಾತ್ರವಲ್ಲದೆ ಅವಳನ್ನು ಕೂಡಿದನು. ಕೊನೆಗೆ ಅವಳ ಗಂಡನನ್ನು ಮೋಸದಿಂದ ಕೊಲ್ಲಿಸಿದ ಇದರಿಂದಾಗಿ ದಾವೀದನ ಮೇಲೆ ಶಾಪ ಬರುವುದನ್ನು ಕಾಣುತ್ತೇವೆ. ದೇವರು ಪ್ರವಾದಿಯಾದ ನಾತನನ್ನು ದಾವೀದನ ಬಳಿಗೆ ಕಳುಹಿಸಿದನು.

"ಆಗ ನಾತನನು ದಾವೀದನನ್ನು ನೋಡಿ ಆ ಮನುಷ್ಯನು ನೀನೇ. ಇಗೋ ಇಸ್ರಾಯೇಲ್ ದೇವರಾದ ಯೆಹೋವನು ನಿನಗೆ ಹೇಳುವುದೇನೆಂದರೆ ನಿನ್ನನ್ನು ಅಭಿಷೇಕಿಸಿ ಇಸ್ರಾಯೇಲರ ಅರಸನನ್ನಾಗಿ ಮಾಡಿದವನೂ, ಸೌಲನ ಕೈಗೆ ಸಿಕ್ಕದಂತೆ ತಪ್ಪಿಸಿದವನೂ ನಾನೇ. ಇದಲ್ಲದೆ ನಾನು ನಿನಗೆ ನಿನ್ನ ಯಜಮಾನನ ಮನೆಯನ್ನು ಒಪ್ಪಿಸಿದೆನು; ಅವನ ಹೆಂಡತಿಯರನ್ನು ನಿನ್ನ ಮಗ್ಗಲಿಗೆ ಕೊಟ್ಟೆನು. ಇಸ್ರಾಯೇಲ್ ಮತ್ತು ಯೆಹೂದ ಕುಲಗಳನ್ನು ನಿನಗೆ ವಶಪಡಿಸಿದೆನು. ಇದು ಸಾಕಾಗಿರದಿದ್ದರೆ ನಾನು ನಿನಗೆ ಇನ್ನೂ ಬೇಕಾದದ್ದನ್ನು ಕೊಡುತ್ತಿದ್ದೆನು. ಹೀಗಿರಲು ನೀನು ಯೆಹೋವನಾದ ನನ್ನ ಆಜ್ಞೆಯನ್ನು ತಿರಸ್ಕರಿಸಿ ನನ್ನ ದೃಷ್ಟಿಯಲ್ಲಿ ಕೆಟ್ಟದ್ದಾಗಿರುವುದನ್ನು ಮಾಡಿದ್ದೇನು? ನೀನು ಹಿತ್ತಿಯನಾದ ಊರೀಯನನ್ನು ಕತ್ತಿಯಿಂದ ಕೊಲ್ಲಿಸಿ ಅವನ ಹೆಂಡತಿಯನ್ನು ನಿನ್ನ ಹೆಂಡತಿಯನ್ನಾಗಿ ತೆಗೆದುಕೊಂಡಿ. ನೀನು ನನ್ನ ಆಜ್ಞೆಯನ್ನು ತಿರಸ್ಕರಿಸಿದರಿಂದಲೂ ಹಿತ್ತಿಯನಾದ ಊರೀಯನನ್ನು ಅಮ್ಮೋನಿಯರ ಕತ್ತಿಯಿಂದ ಕೊಲ್ಲಿಸಿ ಅವನ ಹೆಂಡತಿಯನ್ನು ನಿನ್ನ ಹೆಂಡತಿಯನ್ನಾಗಿ ತೆಗೆದುಕೊಂಡಿದರಿಂದಲೂ ಕತ್ತಿಯು ನಿನ್ನ ಮನೆಯನ್ನು ಬಿಟ್ಟು ಹೋಗುವುದಿಲ್ಲ. ಯೆಹೋವನಾದ ನನ್ನ ಮಾತನ್ನು ಕೇಳು ನಾನು ನಿನ್ನ ಮನೆಯವರಿಂದಲೇ ನಿನಗೆ ಕೇಡು ಉಂಟಾಗುವಂತೆ ಮಾಡುವೆನು. ನಿನ್ನ ಹೆಂಡತಿಯರನ್ನು ತೆಗೆದು ನಿನ್ನ ಎದುರಿನಲ್ಲಿಯೇ ಇನ್ನೊಬ್ಬನಿಗೆ ಕೊಡುವೆನು. ಅವನು ಹಗಲಿನಲ್ಲಿಯೇ ಅವರ ಕೂಡ ಮಲಗುವನು. ನೀನು ಅದನ್ನು ಗುಪ್ತವಾಗಿ ಮಾಡಿದಿ; ನಾನು ಹೇಳುವ ಮಾತಾದರೋ ಎಲ್ಲಾ ಇಸ್ರಾಯೇಲರ ಮುಂದೆ ಪ್ರಕಟವಾಗಿ ನೆರವೇರುವದು ಎಂಬುದೇ ಅಂದನು" (2 ಸಮು. 12:7–12).

ದಾವೀದನು ಸೈತಾನನಿಂದ ಶೋಧನೆಗೆ ಒಳಗಾಗಿ ವ್ಯಭಿಚಾರ ಪಾಪ ಮಾತ್ರವಲ್ಲದೇ ಕೊಲೆಯಂತಹ ಪಾಪವನ್ನು ಮಾಡಿದನು. ದೇವರು ಪ್ರವಾದಿಯಾದಂತಹ ನಾತಾನನ ಮೂಲಕ ಹೇಳಿದ ಶಾಪವು ಮುಂದಿನ ಕಾಲದಲ್ಲಿ ದಾವೀದನ ಜೀವಿತದಲ್ಲಿ ನೆರವೇರುವುದನ್ನು ಕಾಣಬಹುದು. ನಾನು ಪರಿಶುದ್ಧನಾಗಿರುವಂತೆಯೇ ನೀವೂ ಕೂಡ ಪರಿಶುದ್ಧರಾಗಿರಬೇಕೆಂದು ಕರ್ತನು ಹೇಳಿದ್ದಾನೆ (ಯಾಜ. 19:2, 1 ಪೇತ್ರ. 1:15–16).

ಮುಂದುವರಿಯುವದು......

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

ಆತನು ನಿನ್ನ ಪ್ರಾಂತದೊಳಗೆ ಸೌಭಾಗ್ಯವನ್ನುಂಟು ಮಾಡುತ್ತಾನೆ; ಶ್ರೇಷ್ಠವಾದ ಗೋದಿಯಿಂದ ನಿನ್ನನ್ನು ತೃಪ್ತಿಗೊಳಿಸುತ್ತಾನೆ (ಕೀರ್ತ. 147:14).

# ಡಿಜಿಎಮ್ ಬೇತೇಲ್ 24 ಗಂಟೆಯ ಪ್ರಾರ್ಥನಾ ಗೋಪುರ

ಪ್ರತಿ ಸೋಮವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಮಧ್ಯಸ್ಥಿಕೆಯ ಪ್ರಾರ್ಥನೆ.**

ಪ್ರತಿ ಬುಧುವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆಯ ಪ್ರಾರ್ಥನೆ.**

ಪ್ರತಿ ಶನಿವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆ ಹಾಗೂ ಬಿಡುಗಡೆಯ ಪ್ರಾರ್ಥನೆ.**

## ಪ್ರಾರ್ಥನಾ ಗೋಪುರದ ವಿಳಾಸ :

**ಡಿಜಿಎಮ್ ಬೇತೇಲ್ 24 ಗಂಟೆಯ ಪ್ರಾರ್ಥನಾ ಗೋಪುರ, ರಕ್ಷಣಾಪುರ ಕಂಪೌಂಡ್,
ಇನ್ನಂಜೆ ಗ್ರಾಮ, ಉಡುಪಿ – 574115. ದೂರವಾಣಿ : 0091 820 2559886**

"ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು" (ಮತ್ತಾ. 25:34–36).

**ಪ್ರತಿ ತಿಂಗಳು ವಿಶ್ವಾಸದಮನೆ ಅನಾಥಾಶ್ರಮಕ್ಕೆ ಅಕ್ಕಿ 25 ಕಿಲೋ. ದಿಂದ ಎಷ್ಟು ಸಾಧ್ಯವಿರುತ್ತದೋ ಅಷ್ಟು. ಅಕ್ಕಿಯನ್ನು ಕೊಡಬಯಸುವವರು ನಮಗೆ ಬೇಕಾಗಿದ್ದಾರೆ. ನೀವು ಕೊಡುವ ಅಕ್ಕಿಯಲ್ಲಿ ಕೆಲವರು ಊಟಮಾಡಿ ತೃಪ್ತರಾದಾಗ ಕರ್ತನು ಪರಲೋಕದಿಂದ ನಿಮ್ಮನ್ನು ಆಶೀರ್ವಾದ ಮಾಡುತ್ತಾನೆ.**

## ಡಿಜಿಎಮ್ ಬೇತೇಲ್ ಅಂಕಣ

- **ಡಿಸೆಂಬರ್ 15 ರಿಂದ ಜನವರಿ 04 ರವರೆಗೆ 21 ದಿವಸದ ಬಿಡುಗಡೆ, ಸ್ವಸ್ಥತೆ ಉಪವಾಸ ಕೂಟವನ್ನು ಡಿಜಿಎಮ್ ಬೇತೇಲ್ ಚರ್ಚ್ ಶಂಕರಪುರ ಉಡುಪಿಯಲ್ಲಿ ಏರ್ಪಡಿಸಲಾಗಿದೆ.**

ನಾನು ಜ್ಞಾನಮಾರ್ಗವನ್ನು ಉಪದೇಶಿಸಿ ಧರ್ಮಮಾರ್ಗದಲ್ಲಿ ನಿನ್ನನ್ನು ನಡಿಸುವೆನು
(ಜ್ಞಾನೋ. 4:11).

## OUR BANK ACCOUNT DETAILS :

**CANARA BANK, Shankarpura Branch. A/c Name : DGMBC Trust**
**A/c. No. 0636101011338 IFSC : CNRB 0000636 Swift : CNRBINBBRFM**

**CORPORATION BANK, Kurkal Branch A/c Name : DGMBC Trust**
**A/c. No. 018900101007084 IFSC : CORP 0000189 Swift : CORPINBB148**

**ICICI BANK, Udupi Branch A/c Name : DGMBC Trust A/c. No. 007201025754**
**Swift : ICICINBBXXX IFSC : ICIC0000072**

## ಓದುಗರಿಗೆ ವಿಶೇಷ ಸೂಚನೆ

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 180/–ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 180/–ನ್ನು ಮನಿಯಾರ್ಡರ್/ಡಿ.ಡಿ. ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಗೆ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, 'ದೇವರ ಸ್ವರ',
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Email : editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: 0091-820 2589070, 0091-820 200 2781
E-mial: dgmofficial@gmail.com

ಯೆಹೋವನು ತನ್ನ ಸೃಷ್ಟಿಕ್ರಮದಲ್ಲಿ ಮೊದಲು ನನ್ನನ್ನು ನಿರ್ಮಿಸಿದನು;
ಆತನ ಪುರಾತನಕಾರ್ಯಗಳಲ್ಲಿ ನಾನೇ ಪ್ರಥಮ (ಜ್ಞಾನೋ. 8:22).

## ಮಹಿಳೆಯರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

2 ಪೂರ್ವ. 26:11–23 ರವರೆಗೆ ಅರಸನಾದ ಉಜ್ಜೀಯನ ಬಗ್ಗೆ ಓದಿ ತಿಳಿದುಕೊಳ್ಳುತ್ತೇವೆ. ಅದರಲ್ಲಿ 2 ಪೂರ್ವ. 26:15–16 ವಾಕ್ಯ ಓದಿ ಧ್ಯಾನಿಸೋಣ. "ಇದಲ್ಲದೆ ಅವನು ಬಾಣಗಳನ್ನೂ ದೊಡ್ಡ ಕಲ್ಲುಗಳನ್ನೂ ಎಸೆಯುವುದಕ್ಕಾಗಿ ಜಾಣರ ಕಲ್ಪನೆಯ ಮೇರೆಗೆ ಯಂತ್ರಗಳನ್ನು ಮಾಡಿಸಿ ಅವುಗಳನ್ನು ಯೆರೂಸಲೇಮಿನಲ್ಲಿ ಬುರುಜುಗಳ ಮೇಲೆಯೂ ಆಳು ವೇರಿಗಳ ಮೇಲೆಯೂ ಇಡಿಸಿದನು. ಅವನು ಬಲಿಷ್ಠನಾಗುವವರೆಗೂ ದೇವರ ಆಶ್ಚರ್ಯವಾದ ಸಹಾಯವನ್ನು ಹೊಂದಿದನು; ಅವನ ಕೀರ್ತಿಯು ದೂರದವರೆಗೆ ಹಬ್ಬಿತ್ತು. ಆದರೆ ಅವನು ಬಲಿಷ್ಠನಾದ ಮೇಲೆ ಗರ್ವಿಷ್ಠನಾಗಿ ಭ್ರಷ್ಟನಾದನು; ತನ್ನ ದೇವರಾದ ಯೆಹೋವನಿಗೆ ದ್ರೋಹಿಯಾಗಿ ಧೂಪವೇದಿಯ ಮೇಲೆ ತಾನೇ ಧೂಪ ಹಾಕಬೇಕೆಂದು ಯೆಹೋವನ ಆಲಯದೊಳಕ್ಕೆ ಹೋದನು"

**ಹಳೆಯ ಒಡಂಬಡಿಕೆಯಲ್ಲಿ 4 ರೀತಿಯ ಅಭಿಷೇಕಗಳಿದ್ದವು :–**

1. ರಾಜ, 2. ಯಾಜಕ, 3. ಪ್ರವಾದಿ, 4. ನ್ಯಾಯಸ್ಥಾಪಕ

ವಿವಿಧ ಸೇವೆಗಳು, ಆ ಸೇವೆಗಳಿಗೆ ತಕ್ಕ ದೇವರ ಕರೆಯೂ ಇತ್ತು.

1. ರಾಜ (ದೇಶದ ಆಡಳಿತ ನಡೆಸುವುದು)
2. ಯಾಜಕ (ಯಾಜಕ ಸೇವೆ, ಯಜ್ಞ ನೈವೇದ್ಯಗಳ, ಸೇವೆ ನಡೆಸುವುದು)
3. ಪ್ರವಾದಿ (ಜನರನ್ನು, ರಾಜರನ್ನು ಎಚ್ಚರಿಸಿ ಭವಿಷತ್ತಿನ ಕಾರ್ಯಗಳನ್ನು ತಿಳಿಸುವುದು)
4. ನ್ಯಾಯಸ್ಥಾಪಕ (ಜನರಿಗೆ ನ್ಯಾಯತೀರಿಸಿ ನಡಿಸುವುದು)
5. ಲೇವಿ (ದೇವದರ್ಶನ ಗುಡಾರದ ಸಾಮಾನುಗಳನ್ನು ಹೊರುವುದು)
6. ಸಂಗೀತ ಮಂಡಳಿ (ದೇವರನ್ನು ಆರಾಧಿಸುವ ಪ್ರತ್ಯೇಕ ಗುಂಪು)
7. ದೇವದರ್ಶನ ಗುಡಾರದ ಕೆತ್ತನೆ ಕೆಲಸ ಮಾಡುವುದು (ವಿವಿಧ ಜ್ಞಾನದ ಕೆಲಸ)
8. ಮಂತ್ರಿಗಳು (ರಾಜನಿಗೆ ಆಲೋಚನೆ ಕೊಡುವವರು).

ಹೀಗೆ ಅನೇಕ ವಿಧವಾದ ಸೇವೆಗಳನ್ನು ನಾವು ಹಳೆ ಒಡಂಬಡಿಕೆಯಲ್ಲಿ ಕಾಣಬಹುದು. ಕರ್ತನು ಯಾರನ್ನು ಯಾವ ಸೇವೆಗೆ ಕರೆದಿದ್ದಾನೋ ಆ ಸೇವೆಯನ್ನು ಅವನು ಮಾಡಬೇಕಾಗಿತ್ತು. ಒಬ್ಬ ವ್ಯಕ್ತಿಗೆ ದೇವರಿಂದ ಒಂದು ಕರೆ ಇರುವುದಾದರೆ ಆ ಕರೆಗೆ ತಕ್ಕ ಸೇವೆ ಕೂಡ ಇರುತ್ತದೆ. ದೇವರು ಒಂದು ಸೇವೆಗೆ ಕರೆದು ಇನ್ನೊಂದು ಸೇವೆ ಮಾಡಲು ಒತ್ತಾಯ ಮಾಡುವುದಿಲ್ಲ.

"ಅಂತಿಯೋಕ್ಯದಲ್ಲಿದ್ದ ಸಭೆಯೊಳಗೆ ಪ್ರವಾದಿಗಳೂ ಬೋಧಕರೂ ಇದ್ದರು; ಯಾರಾರಂದರೆ ಬಾರ್ನಬ, ನೀಗರನೆಂಬ ಸಿಮೆಯೋನ, ಕುರೇನ್ಯದ ಲೂಕ್ಯ, ಉಪರಾಜನಾದ ಹೆರೋದನ ಸಾಕತಮ್ಮನಾದ ಮೆನಹೇನ, ಸೌಲ ಇವರೇ ಇವರು ಕರ್ತನನ್ನು ಸೇವಿಸುತ್ತಾ, ಉಪವಾಸ ಮಾಡುತ್ತಾ ಇದ್ದಾಗ ಪವಿತ್ರಾತ್ಮನು ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ ಎಂದು ಹೇಳಿದನು. ಆಗ ಅವರು ಉಪವಾಸವಿದ್ದು ಪ್ರಾರ್ಥನೆ ಮಾಡಿ ಆ ಇಬ್ಬರ ಮೇಲೆ ಹಸ್ತಾರ್ಪಣೆ ಮಾಡಿ ಅವರನ್ನು ಕಳುಹಿಸಿಕೊಟ್ಟರು" (ಅ.ಕೃ. 13:3).

ಮೇಲಿನ ವಾಕ್ಯಗಳ ಮೂಲಕ ನಾವು ತಿಳಿದುಕೊಳ್ಳುವುದೇನೆಂದರೆ ದೇವರು ಒಬ್ಬ ವ್ಯಕ್ತಿಯನ್ನು ಕರೆಯುವುದಾದರೆ ಆ ಕರೆಗೆ ಒಂದು ಕೆಲಸ ಇರುತ್ತದೆ, ದೇವರು ಕೆಲಸ ಇಲ್ಲದೇ ಒಬ್ಬ ವ್ಯಕ್ತಿಯನ್ನು ಕರೆಯುವುದಿಲ್ಲ. ಅನೇಕರು ನನ್ನ ಕರೆ ವಿಶೇಷವಾದ ಕರೆ ಎಂದು ಹೇಳುತ್ತಾ ತಿರುಗಾಡುತ್ತಿರುತ್ತಾರೆ. ಅವರಿಗೆ ಯಾವುದೇ ಸಭೆ ಇರುವುದಿಲ್ಲ, ಕೊನೆಗೆ ಪಾಪದಲ್ಲಿ ಬಿದ್ದು ದೇವರ ನಾಮವನ್ನು ಧೂಷಣೆಗೆ ಒಳಪಡಿಸುತ್ತಾರೆ. **"ಹಾಗಾದರೆ ಅಪೊಲ್ಲೋಸನು ಏನು? ಪೌಲನು ಏನು? ಅವರು ಸೇವಕರು ಅವರ ಮುಖಾಂತರ ನೀವು ಕ್ರಿಸ್ತನನ್ನು ನಂಬುವವರಾದಿರಿ. ಕರ್ತನು ಒಬ್ಬೊಬ್ಬನಿಗೆ ದಯಾಪಾಲಿಸಿದ ಪ್ರಕಾರ ಅವರು ಸೇವೆ ಮಾಡುವವರಾಗಿದ್ದಾರೆ."** (1 ಕೊರಿ. 3:5)

ಪ್ರತಿಯೊಬ್ಬರು ದೇವರಿಂದ ತಮಗೆ ಯಾವ ಕರೆ ಇದೆ ಎಂದು ಖಚಿತಪಡಿಸಿಕೊಂಡು ಆ ಕರೆಗೆ ತಕ್ಕ ಸೇವೆ ಮಾಡಿದರೆ ಮಾತ್ರ ಫಲಭರಿತವಾಗಿ ಸೇವೆ ಮಾಡಬಹುದು.

ಮೇಲಿನ ವಚನಗಳಲ್ಲಿ ಅರಸನಾದ ಉಜ್ಜೀಯನ ಕರೆಯು ಅದು ರಾಜನ ಕರೆಯಾಗಿತ್ತು. ಅವನು ಎಂದಿಗೂ ಒಬ್ಬ ಯಾಜಕನು ಮಾಡುವ ಸೇವೆ ಮಾಡಲು ದೇವರಿಂದ ಅನುಮತಿ ಇರಲಿಲ್ಲ ಆದರೂ ಆತನು ರಾಜನೆಂಬ ಗರ್ವದಿಂದ ಯಾಜಕರ ಸೇವೆಯಾದ ಧೂಪಸುಡುವಂತಹ ಸೇವೆ ಮಾಡಲು ಯಾಜಕರ ಎಚ್ಚರಿಕೆಯನ್ನು ಕಡೆಗಣಿಸಿ ಮುಂದಾದಾಗ ದೇವರ ಶಿಕ್ಷೆಗೆ

ಕರ್ತನೇ, ಜನಾಂಗಗಳಲ್ಲಿ ನಿನ್ನನ್ನು ಸ್ತುತಿಸುವೆನು; ಸರ್ವದೇಶದವರೊಳಗೆ ನಿನ್ನನ್ನು ಕೊಂಡಾಡುವೆನು (ಕೀರ್ತ. 57:9).

ಗುರಿಯಾಗಿ ಕುಷ್ಟರೋಗಿಯಾದನು.

ಸತ್ಯವೇದದಿಂದ ಇನ್ನೊಂದು ದೃಷ್ಟಾಂತವನ್ನು ನಿಮ್ಮ ಮುಂದೆ ಇಡುತ್ತೇನೆ. ಅರಣ್ಯ. 16:1–7 ರಲ್ಲಿ ನಡೆದ ಘಟನೆಯನ್ನು ಓದಿ ತಿಳಿಯಬಹುದು. ಕೋರಹ, ದಾತಾನ್, ಅಬೀರಾಮರೂ ಹಾಗೂ ಸಮೂಹದಲ್ಲಿ ಮುಖ್ಯಸ್ಥರಾಗಿಯೂ ಆಲೋಚನಾಕರ್ತರಾಗಿಯೂ ಹೆಸರುಗೊಂಡಂತಹ ಇನ್ನೂರ ಐವತ್ತು (250) ಮಂದಿ ಮೋಶೆ ಆರೋನರಿಗೆ ವಿರುದ್ಧವಾಗಿ ತಿರುಗಿ ಬೀಳುವಂತಹದ್ದನ್ನು ನೋಡುತ್ತೇವೆ. ಇವರೆಲ್ಲರೂ ಲೇವಿಯರಾಗಿದ್ದರು. ದೇವರು ಲೇವಿವಂಶದವರಿಗೆ ಒಂದು ಪ್ರತ್ಯೇಕವಾದ ಸೇವೆ ಕೊಟ್ಟಿದ್ದನು ಅದ್ಯಾವುದೆಂದರೆ

1) ಲೇವಿಯರು ದೇವದರ್ಶನ ಗುಡಾರದ ಪರಿಚರ್ಯವನ್ನು ನಡೆಸಬೇಕು
2) ದೇವರ ಸೇವಾ ಕಾರ್ಯಕ್ಕಾಗಿ ಆರೋನನ ಕೆಳಗಿರಬೇಕು (ಅಧೀನದಲ್ಲಿರಬೇಕು)
3) ಅರಣ್ಯ. 1:53, 3:5–10 ದೇವದರ್ಶನ ಗುಡಾರದ ಸಾಮಾನುಗಳನ್ನು ಕಾಯಬೇಕು.
4) ಅರಣ್ಯ. 3:10 ಯಾಜಕೋದ್ಯೋಗ ಮಾಡಲು ಲೇವಿಯರಿಗೆ ಅನುಮತಿ ಇರಲಿಲ್ಲ.
5) ಅರಣ್ಯ. 3:5–10 ಆಜ್ಞಾಶಾಸನಗಳಿರುವ ಗುಡಾರವನ್ನು ಅದರ ಸಾಮಾನು ಉಪಕರಣ ಇವುಗಳನ್ನು ಅವರು ನೋಡಬೇಕು (ಅರ. 1:47–50).
6) ಅವರು ದೇವದರ್ಶನದ ಗುಡಾರದ ಸಾಮಾನುಗಳನ್ನು ಹೊರಬೇಕು (ಅರ. 1:50).
7) ದೇವದರ್ಶನ ಗುಡಾರದ ಸೇವೆ ಮಾಡಲು ಅದರ ಸುತ್ತಲಿರಬೇಕು (ಅರ. 1:50).
8) ಇಸ್ರಾಯೇಲರು ಪ್ರಯಾಣಿಸುವಾಗ ದೇವದರ್ಶನ ಗುಡಾರವನ್ನು ಲೇವಿಯರೇ ಬಿಚ್ಚಬೇಕು. ಇಳಿಯುವಾಗ ಲೇವಿಯರೇ ಅದನ್ನು ಹಾಕಬೇಕು, ಇತರರು ಹತ್ತಿರಕ್ಕೆ ಬಂದರೆ ಅವರಿಗೆ ಮರಣಶಿಕ್ಷೆಯಾಗಬೇಕು (ಅರ. 1:51).

ಹಾಗೂ ಲೇವಿಯ ಮೂರು ಮಂದಿ ಮಕ್ಕಳ ಮೂರು ವಿಧವಾದ ಸೇವೆಯನ್ನು ನಾವು ಇಲ್ಲಿ ಕಾಣಬಹುದು.

1) ಕೆಹಾತ್ಯರು (ಅರ. 4:1–20).
2) ಗೇರ್ಷೋನ್ಯರು (ಅರ. 4:21–41).
3) ಮೆರಾರೀಯರು (ಅರ. 4:42–49).

ಇಷ್ಟೆಲ್ಲಾ ಗೊತ್ತಿದ್ದು ಲೇವಿಯರು ಅರಣ್ಯಕಾಂಡ 16 ರಲ್ಲಿ ಮೋಶೆಗೂ ಆರೋನನಿಗೂ ವಿರುದ್ಧವಾಗಿ ತಿರುಗಿ ಬೀಳುವುದನ್ನು ಗಮನಿಸಬಹುದು.

ಅರ. 16:8–11 ರಲ್ಲಿ ಮೋಶೆ ಕೋರಹನಿಗೆ ಲೇವಿಯರೇ, ಕೇಳಿರಿ. ಇಸ್ರಾಯೇಲ್ಯರ ದೇವರು ಅವರ ಸಮೂಹದವರಿಂದ ನಿಮ್ಮನ್ನು ಪ್ರತ್ಯೇಕಿಸಿ ತನ್ನ ಗುಡಾರದ ಪರಿಚರ್ಯವನ್ನು ಮಾಡಲು ಸರ್ವಸಮೂಹದವರಿಗೋಸ್ಕರ ಸೇವೆಯನ್ನು ಮಾಡಲೂ [ಕೋರಹನೇ,] ನಿನ್ನನ್ನೂ ನಿನ್ನ ಸ್ವಕುಲದವರಾದ ಲೇವಿಯರನ್ನೂ ತನ್ನ ಹತ್ತಿರ ಇಟ್ಟುಕೊಂಡದ್ದು ಅಲ್ಪಕಾರ್ಯವೆಂದು ನಿಮಗೆ ಕಾಣುತ್ತದೋ? ಯಾಜಕತ್ವವೂ ನಿಮಗೆ ಆಗಬೇಕೆಂದು ಕೋರುತ್ತೀರಾ? ನೀನೂ ನಿನ್ನ ಸಮೂಹದವರೆಲ್ಲರೂ ಯೆಹೋವನಿಗೆ ವಿರೋಧವಾಗಿ ಕೂಡಿಕೊಂಡವರು; ಆರೋನನಿಗೆ ವಿರೋಧವಾಗಿ ಗುಣಗುಟ್ಟುವುದೇನು ಎಂದು ಹೇಳಿದನು.

ದೇವರು ಒಬ್ಬ ವ್ಯಕ್ತಿಗೆ ಕೊಟ್ಟ ಅದೇ ಸೇವೆಯಲ್ಲಿ ಮುಂದುವರಿಯಬೇಕು. ಆಗ ಮಾತ್ರ ಆಶೀರ್ವಾದದೊಂದಿಗೆ ಸೇವೆ ಮಾಡಲು ಸಾಧ್ಯ. ಕೊನೆಗೆ "ಮತ್ತು ಯೆಹೋವ ಬಳಿಯಿಂದ ಬೆಂಕಿ ಹೊರಟು ಧೂಪವನ್ನು ಅರ್ಪಿಸುತ್ತಿದ್ದ ಆ ಇನ್ನೂರ ಐವತ್ತು ಮಂದಿಯನ್ನು ಭಸ್ಮಮಾಡಿತು" (ಅರ. 16:35).

ಯೆಹೋವನು ಮೋಶೆಯ ಮೂಲಕ ಹೇಳಿದ ಅಪ್ಪಣೆಯ ಮೇರೆಗೆ ಯಾಜಕನಾದ ಎಲ್ಲಾಜಾರನು ಸುಟ್ಟು ಹೋದವರಿಂದ ಮೊದಲು ತರಲ್ಪಟ್ಟಿದ್ದ ಆ ತಾಮ್ರದ ಧೂಪಾರತಿಗಳನ್ನು ತೆಗೆದುಕೊಂಡು ತಗಡುಗಳಾಗಿ ಹೊಡಿಸಿ ಯಜ್ಞವೇದಿಗೆ ಮುಚ್ಚಳವನ್ನು ಮಾಡಿಸಿದನು. ಆರೋನನ ಸಂತತಿಯವರಲ್ಲದ ಇತರರಲ್ಲಿ ಯಾರೂ ಯೆಹೋವನ ಸನ್ನಿಧಿಗೆ ಬಂದು ಧೂಪವನ್ನು ಸಮರ್ಪಿಸಬಾರದು; ಸಮರ್ಪಿಸಿದರೆ ಕೋರಹನಿಗೂ ಅವನ ಜೊತೆಗಾರರಿಗೂ ಉಂಟಾದ ಗತಿಗೆ ಗುರಿಯಾದಾರೆಂದು ಇಸ್ರಾಯೇಲರಿಗೆ ನೆನಪು ಹುಟ್ಟಿಸುವದಕ್ಕಾಗಿ ಅದು ಗುರುತಾಯಿತು" (ಅರ. 16:39–40).

2 ಪೂರ್ವ. 26:11–23ರಲ್ಲಿ ಅರಸನಾದ ಉಜ್ಜೀಯನು ಕೂಡ ಇದೇ ತಪ್ಪನ್ನು ಮಾಡಿದನು. ಇಂದು ಹೊಸ ಒಡಂಬಡಿಕೆಯ ಯೇಸುಕ್ರಿಸ್ತನ ಸಭೆಯಲ್ಲಿ ಕರ್ತನಾದ ಯೇಸುಕ್ರಿಸ್ತನು 5 ವಿಧವಾದ ಸೇವೆಗಳನ್ನು ಕೊಟ್ಟಿದ್ದಾನೆ. ಎಫೆ. 4:11 ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸುವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು.

ಕರ್ತನ ಸಭೆಯಲ್ಲಿ 5 ವಿಧವಾದ ಸೇವಾ ವರಗಳಿವೆ.

ಸೇನಾಧೀಶ್ವರನಾದ ಯೆಹೋವನೇ, ನಿನ್ನಲ್ಲಿ ಭರವಸವಿಡುವ ಮನುಷ್ಯನು ಧನ್ಯನು (ಕೀರ್ತ. 84:12).

1. ಅಪೋಸ್ತಲರು (ಸಭೆಗಳನ್ನು ಸ್ಥಾಪಿಸುವ ಸೇವೆ)
2. ಪ್ರವಾದಿಗಳು (ಭಕ್ತಿವೃದ್ಧಿ, ಸಂತೈಸುವಿಕೆ, ಪ್ರೋತ್ಸಾಹವನ್ನುಂಟು ಮಾಡುವುದು)
3. ಸುವಾರ್ತಿಕರು (ಅನೇಕ ಸ್ಥಳಗಳಿಗೆ ಹೋಗಿ ಸುವಾರ್ತೆ ಸೇವೆ ನಡೆಸುವುದು)
4. ಸಭಾಪಾಲಕರು (ಸಭೆಗಳನ್ನು ಪರಿಪಾಲಿಸುವುದು)
5. ಉಪದೇಶಿಗಳು (ಉಪದೇಶ ಮಾಡುವುದು)

1. ಅಪೋಸ್ತಲನು ಮುಖ್ಯ ಕಾರ್ಯನಿರ್ವಾಹಕನಾಗಿರುತ್ತಾನೆ, ಸಭೆಗಳನ್ನು ಸ್ಥಾಪಿಸುತ್ತಾನೆ.
2. ಸಭಾಪಾಲಕನು ಸಭೆ ನಡೆಸುತ್ತಾನೆ.

ಉಳಿದ 3 ಜನರು ಅಂದರೆ ಸುವಾರ್ತಿಕನು ಎಲ್ಲಿ ಸೇವೆಗೆ ಹೋದರೂ, ಪ್ರವಾದಿ ಎಲ್ಲಿ ಸೇವೆಗೆ ಹೋದರೂ, ಉಪದೇಶಿ ಸತ್ಯವೇದ ಶಾಲೆಗೆ, ಸೆಮಿನಾರ್, ಪವರ್ ಕಾನ್ಫರೆನ್ಸ್ ಎಲ್ಲಿಗೆ ಹೋದರೂ ಒಬ್ಬ ಸಭಾಪಾಲಕನ ಕೆಳಗೆ ಅಧೀನದಲ್ಲಿದ್ದು ಅವರು ಸೇವೆ ನಡೆಸಬೇಕು.

ಸುವಾರ್ತಿಕರು, ಪ್ರವಾದಿಗಳು, ಉಪದೇಶಿಗಳು ಸಭೆಗಳನ್ನು ನಡೆಸಬಾರದು, ಸಭೆ ನಡಿಸುವುದು ಅವರ ಕರೆ ಅಲ್ಲ. ಆದರೆ ದುಃಖಕರವಾದ ಸಂಗತಿ ಏನೆಂದರೆ ಲೋಕದಲ್ಲಿ ಇಂದು ಅನೇಕರು ತಿಳಿದೋ ತಿಳಿಯದೋ ತಪ್ಪಾದ ರೀತಿಯಲ್ಲಿ ಸೇವೆ ಮಾಡುತ್ತಿದ್ದಾರೆ. ಒಬ್ಬ ಪ್ರವಾದಿಗೆ ಒಂದು ಸಭೆ ಇದೆ, ಒಬ್ಬ ಸುವಾರ್ತಿಕನಿಗೆ ಒಂದು ಸಭೆ ಇದೆ, ಒಬ್ಬ ಉಪದೇಶಿಗೆ ಒಂದು ಸಭೆ ಇದೆ.

"ಆದದರಿಂದ ಸಹೋದರರೇ, ದೇವರು ನಿಮ್ಮನ್ನು ಕರೆದದ್ದನ್ನೂ ಆದುಕೊಂಡದ್ದನ್ನೂ ದೃಢಪಡಿಸಿಕೊಳ್ಳುವುದಕ್ಕೆ ಮತ್ತಷ್ಟು ಪ್ರಯಾಪಡಿರಿ. ಹೀಗೆ ನೀವು ಮಾಡಿದರೆ ಎಂದಿಗೂ ಎಡಹುವುದಿಲ್ಲ" (2 ಪೇತ್ರ. 1:10). "ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ" (ಹೋಶೆ. 4:6).

3. **ಸ್ವಾರ್ಥದಿಂದ ತುಂಬಿದ ಜೀವಿತ** :– ಅನೇಕ ಕ್ರೈಸ್ತ ವಿಶ್ವಾಸಿಗಳು ಆತ್ಮೀಕ ಜೀವಿತದಲ್ಲಿ ಉಷ್ಣತೆ ಕಳಕೊಳ್ಳಲು ಸ್ವಾರ್ಥದಿಂದ ತುಂಬಿದ ಜೀವಿತ ಕಾರಣವಾಗಿದೆ.

ನನ್ನ ಮನೆ, ನನ್ನ ಹೆಂಡತಿ, ನನ್ನ ಗಂಡ, ನನ್ನ ಮಕ್ಕಳು, ನನ್ನ ತಂದೆತಾಯಿ, ನನ್ನ ಕೆಲಸ, ನನ್ನ ವ್ಯಾಪಾರ ಇತ್ಯಾದಿ. "ಎಲ್ಲರೂ ಸ್ವಕಾರ್ಯಗಳ ಮೇಲೆ ಮನಸ್ಸಿಡುತ್ತಾರೆಯೇ ಹೊರತು ಯೇಸುಕ್ರಿಸ್ತನ ಕಾರ್ಯಗಳ ಮೇಲೆ ಮನಸ್ಸಿಡುವುದಿಲ್ಲ" (ಫಿಲಿ. 2:21). ಕೆಲವರು ನನ್ನ ಕುಟುಂಬ ರಕ್ಷಣೆಯಾಗಿದೆಯಲ್ಲ, ಇನ್ನಾಕೆ ಕಷ್ಟಪಡಬೇಕು, ಇನ್ನು ಕೆಲವರು ವ್ಯಾಪಾರ ಕೆಲಸ ಎಂದೇ ಅದರ ಹಿಂದೆ ಇರುತ್ತಾರೆ. ಆತ್ಮಗಳು ನಾಶವಾಗಲಿ, ವಿಶ್ವಾಸಿಗಳು ಅಜ್ಞಾನಿಗಳಾಗಲಿ, ಯೌವನಸ್ಥರು ತಪ್ಪಾದ ಮಾರ್ಗಗಳಲ್ಲಿ ಹೋಗಲಿ ಯಾರಿಗೂ ಬಿದ್ದು ಹೋದದ್ದೇ ಇಲ್ಲ. "ಸಜ್ಜನರು ನಾಶವಾಗುತ್ತಾರೆ, ಯಾರೂ ಮನಸ್ಸಿಗೆ ತಾರರು; ಸದ್ಭಕ್ತರು ಗತಿಸುತ್ತಾರೆ, ಆಹಾ, ಶಿಷ್ಟರು ಕೇಡಿನಿಂದ ಪಾರಾಗಿದ್ದಾರೆ ಎಂದು ಯಾರೂ ಯೋಚಿಸರು" (ಯೆಶಾ. 57:1).

ಆತ್ಮೀಕ ಜೀವಿತದಲ್ಲಿ ಬೆಳೆಯಬೇಕಾದರೆ ನಮ್ಮ ಸ್ವಾರ್ಥವನ್ನು ಬದಿಗೊತ್ತಬೇಕು :–

1. ಸತ್ಯವೇದ ಅಧ್ಯಾಯನಗಳು ಸಭೆಯಲ್ಲಿ ನಡೆಯುವಾಗ ತಪ್ಪದೆ ಹಾಜರಾಗುವುದು (ಮತ್ತಾ 5:1–2, 14:13, ಯೋಹಾ. 8:1–2).
2. ಸುವಾರ್ತೆ ಸಾರಲು ಅವಕಾಶಗಳಿರುವಾಗ ಸದುಪಯೋಗ ಪಡಿಸಿಕೊಳ್ಳುವುದು (2 ತಿಮೊ. 4:1–2).
3. ಆರಾಧನೆಗೆ ತಪ್ಪದೆ ಹೋಗುವುದು (ಅ.ಕೃ. 2:42, 5:12–13).
4. ಸಭೆಯಲ್ಲಿ ಏನಾದರೂ ಕೆಲಸಗಳಿದ್ದರೆ ತಮಗಾಗುವಷ್ಟನ್ನು ಮಾಡುವುದು (ಕೊಲೊ. 3:23, ಪ್ರಸ. 9:10).
5. ದೇವರ ರಾಜ್ಯಕ್ಕೆ ಏನಾದರೂ ವೆಚ್ಚಮಾಡಲು ಹಿಂಜರಿಯಬಾರದು (ಲೂಕ. 6:38).

"ಆದರೆ ಕಡೇ ದಿವಸಗಳಲ್ಲಿ ಕಠಿಣ ಕಾಲಗಳು ಬರುವವೆಂಬುದನ್ನು ತಿಳಿದುಕೋ. ಮನುಷ್ಯರು ಸ್ವಾರ್ಥ ಚಿಂತಕರೂ ಹಣದಾಸೆಯವರೂ ಬಡಾಯಿ ಕೊಚ್ಚುವವರೂ ಅಹಂಕಾರಿಗಳೂ ದೂಷಕರೂ ತಂದೆ ತಾಯಿಗಳಿಗೆ ಅವಿಧೇಯರೂ ಉಪಕಾರ ನೆನಸದವರೂ ದೇವ ಭಯವಿಲ್ಲದವರೂ ಚಾಡಿಹೇಳುವವರೂ ದಮೆಯಿಲ್ಲದವರೂ ಉಗ್ರತೆಯುಳ್ಳವರೂ ಒಳ್ಳೇದನ್ನು ಪ್ರೀತಿಸದವರೂ ದ್ರೋಹಿಗಳೂ ದುಡುಕಿನವರೂ ಉಬ್ಬಿಕೊಂಡವರೂ ದೇವರನ್ನು ಪ್ರೀತಿಸದೆ ಭೋಗಗಳನ್ನೇ ಪ್ರೀತಿಸುವವರೂ ಭಕ್ತಿಯ ವೇಷವಿದ್ದು ಅದರ ಬಲವನ್ನು ಬೇಡವೆನ್ನುವವರೂ ಆಗಿರುವರು" (2 ತಿಮೊ. 3:1–5).

**ಮುಂದುವರಿಯುವದು.........**

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು
ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ನಿನ್ನ ಕಾರ್ಯಗಳನ್ನೆಲ್ಲಾ ಧ್ಯಾನಿಸುವೆನು; ನಿನ್ನ ಪ್ರವರ್ತನೆಗಳನ್ನು ಸ್ಮರಿಸುವೆನು
(ಕೀರ್ತ. 77:12).

## ವಿಶೇಷ ಸೂಚನೆ

ವಿಶ್ವಾಸದ ಮನೆಯ ಹೆಸರು ಹೇಳಿ ಆರ್ಥಿಕ ಸಹಾಯ ಕೇಳಿ ಬರುವುದಾದರೆ ಅವರು ನಮ್ಮವರೇ ಎಂದು ಖಚಿತಪಡಿಸುವುದಕ್ಕಾಗಿ ಕೆಳಕಂಡ ನಂಬರ್‌ಗಳಿಗೆ ವಿಚಾರಿಸಿರಿ. ವಿಶ್ವಾಸದ ಮನೆಗೆ ಹಣ ಕೊಡುವುದಾದರೆ ನೀವು ಅದರ ರಶೀದಿಯನ್ನು ಹಣ ಕೊಟ್ಟವರ ಬಳಿ ಕೇಳಿ ಪಡೆದುಕೊಳ್ಳಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : **0091–820 2002781, 0091–9902334941, 0091–9964070654, 0091–820 2559712.**

---

## ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್ ಆಂಗ್ಲ ಮಾಧ್ಯಮ ಶಾಲೆಗೆ ಬೇಕಾದ ಅವಶ್ಯಕತೆಗಳು :

- **ಶಿಶು ವಿಹಾರಕ್ಕೆ ಬೇಕಾಗುವ ಆಟದ ಸಾಮಗ್ರಿಗಳು**
- **ನೋಟ್ ಬುಕ್ಸ್**
- **ಡೆಸ್ಕ್ ಮತ್ತು ಕುರ್ಚಿಗಳನ್ನು ಕೊಡಲು ಇಚ್ಛಿಸುವ ದಾನಿಗಳು**

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ

**0091 820 2002781, 0091 9902334941**

---




## ನಮ್ಮೊಂದಿಗೆ ಆಚರಿಸಿ



ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ



**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**

**ಮೊಬೈಲ್: 0091 9902334941**

"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.

ಮಕ್ಕಳ ಸ್ವರ

1. ಇಸ್ರಾಯೇಲಿನಲ್ಲಿ ಕುರಿ ಮೇಯಿಸುತ್ತಿದ್ದ ಹುಡುಗನ ಹೆಸರೇನು?
2. ಯೋಸೇಫನಿಗೆ ಎಷ್ಟು ಜನ ಸಹೋದರರು ಇದ್ದರು?
3. ಕಾಯಿನ ಮತ್ತು ಹೇಬೆಲನ ತಂದೆ ತಾಯಿ ಯಾರು?
4. ಬೋವಜನು ಯಾರನ್ನು ಮದುವೆಯಾದನು?
5. ಅಬ್ರಹಾಮನ ಸಹೋದರಳಿಯನ ಹೆಸರೇನು?
6. ಯೋಸೇಫನ ಸಹೋದರನ ಮಗುವಿನ ಹೆಸರೇನು?
7. ಯಾರು ನದಿಯಲ್ಲಿ ಮೋಶೆಯನ್ನು ನೋಡಿದರು?
8. ಮೋಶೆ 10 ದಶಾಜ್ಞೆಗಳನ್ನು ಎಲ್ಲಿ ಪಡೆದುಕೊಂಡನು?
9. ಸೊಲೊಮೋನನು ದೇವರೊಂದಿಗೆ ಏನನ್ನು ಕೇಳಿದನು?
10. ಯೇಸುಕ್ರಿಸ್ತನು ಮೊದಲು ಮಾಡಿದ ಅದ್ಭುತ ಕಾರ್ಯ ಯಾವುದು?

**ನವೆಂಬರ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು**

1) ಅಬ್ರಹಾಮ
2) ಯೆಹೋಶುವ
3) ದೇವದಾರು ವೃಕ್ಷ
4) ರಕ್ತಸಾಕ್ಷಿಯಾಗಿ ಸತ್ತನು.
5) ಗೆತ್ಸೇಮನೆ ತೋಟ
6) ಯೋಹಾನ ಮತ್ತು ಯಾಕೋಬ
7) 1 ಸಮುವೇಲ
8) ರೂಬೇನ್
9) ಅಪೋಸ್ತಲರ ಕೃತ್ಯ
10) ಫಿಲಿಪ್ಪಿಯಲ್ಲಿ.

## ಬೇಕಾಗಿದ್ದಾರೆ

- ಸ್ಟಾಫ್ ನರ್ಸ್ (ಜಿಎನ್ಎಮ್ ನರ್ಸ್ ಮತ್ತು ಬಿಎಸ್‌ಸಿ ನರ್ಸ್)
- ಎಮ್ಎಸ್‌ಡಬ್ಲ್ಯು (ಸೈಕಾಲಾಜಿಸ್ಟ್)
- ಎಮ್.ಬಿ.ಬಿ.ಎಸ್ ವೈದರು
- ಮನೋರೋಗ ತಜ್ಞ ವೈದ್ಯರು (ಸೈಕಿಯಾಟ್ರಿಸ್ಟ್)
- ಕ್ಲೀನರ್ ಮತ್ತು ವಾರ್ಡ್ ಬಾಯ್
- ಲ್ಯಾಬ್ ಟೆಕ್ನಿಷಿಯನ್ ವಿಶ್ವಾಸದಮನೆಯ ಆಸ್ಪತ್ರೆಗೆ ತ್ವರೆಯಾಗಿ ಬೇಕಾಗಿದ್ದಾರೆ.

ಉಚಿತ ವಸತಿ ಸೌರ್ಕಯ ಮತ್ತು ಉತ್ತಮ ವೇತನವನ್ನು (ಸಂಬಳ)ವನ್ನು ಕೊಡಲಾಗುವುದು.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ;

**0091–9902334941, 0091–820 2002781.**

ಅವರು ಯೆಹೋವನ ಪೂಜ್ಯವಾದ ಮಹಾನಾಮವನ್ನು ಕೊಂಡಾಡಲಿ;
ಆತನು ಪರಿಶುದ್ಧನು (ಕೀರ್ತ. 99:3).